ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಜಗದೀಶ ಶೆಟ್ಟರ್ (ಮಾನ್ಯ ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, 2005ರ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, 2005ರ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

3. ಗಮನ ಸೆಳೆಯುವ ಸೂಚನೆ

ವಿಷಯ : ಬೆಳಗಾವಿ ವಿಭಾಗದಲ್ಲಿ ಖಾಸಗಿಯವರು ಅನಧಿಕೃತವಾಗಿ ಬಸ್ಸುಗಳನ್ನು ಓಡಿಸುತ್ತಿರುವುದರಿಂದ ಉಂಟಾಗಿರುವ ಪರಿಸ್ಥಿತಿ ಬಗ್ಗೆ.

ಅಧ್ಯಕ್ಷರು : ಮಾನ್ಯ ಸದಸ್ಯರಾದ ಡಿ.ಆರ್. ಪಾಟೀಲರು ತುರ್ತಾಗಿ ಹೋಗ-ಬೇಕಾಗಿರುವುದರಿಂದ ಅವರ ಹೆಸರಿನ ಮುಂದೆ ಇರುವ ಗಮನ ಸೆಳೆಯುವ ಸೂಚನೆಯನ್ನು ಈಗ ತೆಗೆದುಕೊಳ್ಳೋಣ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಮ್ಮ ಬೆಳಗಾಂ ವಿಭಾಗದಲ್ಲಿ ಸಾರಿಗೆ ಸಂಪೂರ್ಣವಾಗಿ ರಾಷ್ಟ್ರೀಕೃತವಾಗಿದೆ. ಅಲ್ಲಿ ಖಾಸಗಿ ಬಸ್ಸುಗಳು ಓಡಾಟ ಮಾಡುವುದಕ್ಕೆ ಅವಕಾಶ ಇಲ್ಲ. ಹಾಗಾಗಿ ಕಾಂಟ್ರಾಕ್ಟ್ ಕ್ಯಾರೇಜ್ ಮುಖಾಂತರ ಅವರು ತಮ್ಮ ಬಸ್ಸುಗಳನ್ನು ಓಡಿಸುತ್ತಾರೆ. ಕಾಂಟ್ರಾಕ್ಟ್ ಕ್ಯಾರೇಜ್ ಅಂದರೆ ಅವರು ಟಿಕೆಟ್ ಕೊಡುವುದಕ್ಕೆ ಬರುವುದಿಲ್ಲ. ಆದರೆ ಅವರು ರಾಜಾರೋಷವಾಗಿ ನಮ್ಮ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳ ಜೊತೆ ಕಾಂಪೀಟ್ ಮಾಡುತ್ತಾ ಟಿಕೆಟ್ ಕೊಟ್ಟು ಪ್ಯಾಸೆಂಜರ್ಸ್‌ನ್ನು ಹತ್ತಿಸಿಕೊಂಡು ಹೋಗುತ್ತಿರುವಂತಹ ಪ್ರಕರಣಗಳು ನಡೆಯುತ್ತಿವೆ. ಆರ್.ಆರ್. ಬಸ್ಸು ಆಯಿತು. ರಾಣಿ ಚೆನ್ನಮ್ಮ ಬಸ್ಸು, ಅದೇ ರೀತಿ ಬೇರೆ ಬೇರೆ ಕಂಪನಿಯವರು ಟಿಕೆಟ್ ಕೊಟ್ಟು KSRTC ಜೊತೆಗೆ ಪೈಪೋಟಿ ಮಾಡುತ್ತಿದ್ದಾರೆ. ಅದಕ್ಕೆ ನಮ್ಮ ಕೆಲವು ಅಧಿಕಾರಿಗಳು ಕೈ ಜೋಡಿಸುತ್ತಿದ್ದರೂ ಇರಬಹುದು. ನಮ್ಮ ಮಾನ್ಯ ಮಂತ್ರಿಗಳಾದ ಶೆಟ್ಟರ್‌ರವರಿಗೆ ಗೊತ್ತಿದೆ. ಹಾಗಾಗಿ ನಮ್ಮ ಹುಬ್ಬಳ್ಳಿ ಕೆ.ಎಸ್.ಆರ್.ಟಿ.ಸಿ. ಕಾರ್ಪೋರೇಷನ್ ಏನಿದೆ ಬಹುತೇಕ ಇನ್ನು ೬ ಂದು 3–4 ತಿಂಗಳು ಹೀಗೆ ಹೋದರೆ ಅದನ್ನು ಕ್ಲೋಸ್ ಮಾಡುವಂತಹ ಪರಿಸ್ಥಿತಿ ಇದೆ ಎನ್ನುವುದು ಬಹುತೇಕ ತಮ್ಮ ಗಮನಕ್ಕೆ ತಂದಿರಬಹುದು ಅಂತ ನಾನು ತಿಳಿದಿದ್ದೇನೆ. ದುರ್ದೈವದಿಂದ ನಿಮ್ಮ ಆರ್.ಟಿ.ಓ. ಡಿಪಾರ್ಟ್‌ಮೆಂಟ್‌ನವರು, ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟ್ ಅಥಾರಿಟಿಯವರು ಅವರೊಡನೆ ಹ್ಯಾಂಡ್ ಇನ್ ಗ್ಲೋವ್ ಆಗಿದ್ದಾರೆ. ಅವರಿಗೆ ಬಹುತೇಕ ಅದರಿಂದ ಅನುಕೂಲ ಇರಬಹುದು, ಹೀಗಾಗಿ ಹ್ಯಾಂಡ್ ಇನ್

ಗ್ಲೋವ್ ಇದ್ದಾರೆ. ಅವರು ಕೆ.ಎಸ್.ಆರ್.ಟಿ.ಸಿ. ಹಿತರಕ್ಷಣೆಯನ್ನು ಮಾಡಲಿಕ್ಕೆ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಇದರಿಂದ ಬಹಳಷ್ಟು ತೊಂದರೆಯಾಗುತ್ತಿದೆ. ಪ್ರತಿ ಡಿವಿಜನ್‌ನಲ್ಲೂ ಪ್ರತಿನಿತ್ಯ ಲಕ್ಷಾನುಗಟ್ಟಲೆ ಲುಕ್ಸಾನ ಆಗುತ್ತಿದೆ. ಇದು ನಿಲ್ಲಲಿಲ್ಲ, ಅಂದರೆ ಆ ಕಾರ್ಪೋರೇಷನ್ ಕ್ಲೋಸ್ ಆಯಿತು ಅಂದರೆ, ಸಹಸ್ರಾರು ಕಾರ್ಮಿಕರ ಪರಿಸ್ಥಿತಿ ಬಹಳ ಚಿಂತಾಜನಕ ಆಗುತ್ತದೆ. ಅವರ ಬದುಕು ಬಹಳ ಹೀನಾಯಮಾನವಾಗುತ್ತದೆ. ಇದನ್ನು ನಿಲ್ಲಿಸಬೇಕು ಅಂತ ಬಹಳಷ್ಟು ಬೇರೆ ಬೇರೆ ಪ್ರಸಂಗಗಳಿಂದ ಪ್ರಯತ್ನ ಮಾಡಿದರೂ ನಿಲ್ಲಲಿಲ್ಲ. ಈಗ ಅಲ್ಲಿ ಸ್ಥಳೀಯ ಹಿರಿಯರು ಮತ್ತು ಸುಮಾರು 14 ಮಂದಿ ನಾಗರೀಕರು ಏಪ್ರಿಲ್ 1ನೇ ತಾರೀಖಿನಿಂದ ಆಮರಣ ಉಪವಾಸವನ್ನು ಪ್ರಾರಂಭ ಮಾಡಿದ್ದಾರೆ. ದುರ್ದೈವದಿಂದ ಡೆಪ್ಯುಟಿ ಕಮೀಷನರ್ ಒಬ್ಬರನ್ನು ಬಿಟ್ಟರೆ ಸರ್ಕಾರದ ಪರವಾಗಿ ಬೇರೆ ಯಾರೂ ಹೋಗಿ ಅವರನ್ನು ಭೇಟಿಯಾಗಿಲ್ಲ. ಅದಕ್ಕೆ ದಯವಿಟ್ಟು ತಾವು ಕೂಡಲೇ ನಿಮ್ಮ ಟ್ರಾನ್ಸ್‌ಪೋರ್ಟ್ ಕಮೀಷನರ್‌ನ್ನು ಅಲ್ಲಿಗೆ ಕಳುಹಿಸಬೇಕು. ಈ ರೀತಿ ಗೈರು ಕಾನೂನು ಕೆಲಸ ಏನು ಮಾಡುತ್ತಿದ್ದಾರೆ ಅವರ ಮೇಲೆ ಬಹಳ ಕಠಿಣ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಅವರು ನಿಮ್ಮ ಹೆಸರು ಕೆಡಿಸುತ್ತಾರೆ. ಎಲ್ಲಾ ಎಂ.ಎಲ್.ಎ. ಹೆಸರು ಕೆಡುವಂತೆ ಮಾಡುತ್ತಾರೆ. ಅದಕ್ಕೆ ಏಕೆ ಅವಕಾಶ ಕೊಡಬೇಕು. ಆದ್ದರಿಂದ ನಾನು ಈ ಬಗ್ಗೆ ಮಾನ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನೋಟೀಸ್‌ಗೆ ನಾನು ಸಹಿ ಮಾಡಿದ್ದೇನೆ. ನಾನು ಮಾತನಾಡಿದ ಮೇಲೆ ಮಂತ್ರಿಗಳು ಉತ್ತರ ಹೇಳಲಿ. ಮೊದಲು ಸರ್ಕಾರದವರು ದಯವಿಟ್ಟು ಕೆ.ಎಸ್.ಆರ್.ಟಿ.ಸಿ. ಉಳಿಸಬೇಕೋ ಅಥವಾ ಮುಚ್ಚಬೇಕೋ ಎನ್ನುವ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಇಲ್ಲದೇ ಹೋದರೆ ಖಂಡಿತವಾಗಿ ಕೆ.ಎಸ್.ಆರ್.ಟಿ.ಸಿ. ಯನ್ನು ಮುಚ್ಚಬೇಕಾಗುತ್ತದೆ. ಏನಾಗಿದೆ ಅಂದರೆ ಪ್ರವೇಟ್‌ನವರಿಗೆ ಇವರು ಕಾಂಟ್ರಾಕ್ಟ್ ಕ್ಯಾರೇಜ್ ಅಂತ ಕೊಡುತ್ತಾರೆ. ಇಲ್ಲಿಂದ ಪರ್ಮಿಟ್ ನೀಡಲಾಗುತ್ತದೆ. ಪರ್ಮಿಟ್ ಕೊಟ್ಟು ಅವರು ಏನು ಮಾಡುತ್ತಾರೆ. ಎಷ್ಟು ಬಸ್ಸು ಓಡಾಡುತ್ತವೆ ಅಷ್ಟು ಬಸ್ಸು ಹಾಗೆಯೇ ಓಡಾಡುತ್ತವೆ. ಅಲ್ಲಿನ ಪರಿಸ್ಥಿತಿಯನ್ನು ನಾನು ಹೇಳುತ್ತೇನೆ. ಸುಮಾರು 70 ಕೋಟಿ ಹಾನಿ ಇದೆ ಈಗ. ಪ್ರತಿದಿವಸ ಒಂದು ಕೋಟಿ ರೂಪಾಯಿ ಹಾನಿಯಾಗುತ್ತಿದೆ. ನಮ್ಮ ಕೆಎಸ್‌ಆರ್‌ಟಿಸಿ ಗಾಡಿ ಖಾಲಿ ಓಡಾಡುತ್ತವೆ. ಇವರು ಏನು ಮಾಡುತ್ತಾರೆಂದರೆ, ಕೆಎಸ್‌ಆರ್‌ಟಿಸಿಗಿಂತ 5 ರೂಪಾಯಿ ರೇಟ್ ಕಡಿಮೆ ಮಾಡುತ್ತಾರೆ. ರೇಟ್ ಕಡಿಮೆ ಮಾಡಿ ಅದೇ ಗಾಡಿಯಲ್ಲಿ ಓಡಾಡುವಂತೆ ಮಾಡುತ್ತಾರೆ. ಇಡೀ ಜನರೆಲ್ಲಾ ಬೀದಿ ಪಾಲಾಗುತ್ತಾರೆ. ಅಲ್ಲಿ ಜನರು ಅಮರಣಾಂತ ಉಪವಾಸ ಕುಳಿತು ಏಳು ದಿವಸಗಳಾಗಿವೆ. ಬಹುಶಃ ಅವರು ಏಳುತ್ತಿಲ್ಲ. ಆ ಕಾರಣದಿಂದ ನಿಮಗೆ ಕೆಎಸ್‌ಆರ್‌ಟಿಸಿ ಉಳಿಸಬೇಕೆಂಬ ಮನಸ್ಸಿದ್ದರೆ ಖಂಡಿತವಾಗಿ ಈ ಕಾಂಟ್ರಾಕ್ಟ್ ಕ್ಯಾರೇಜ್ ಅನ್ನು ನಿಲ್ಲಿಸಿ.

ಶ್ರೀ ವೈಜನಾಥ ಪಾಟೀಲ್ : ಬೆಂಗಳೂರು, ಗುಲ್ಬರ್ಗಾ, ಬೀದರ್ ಸೇರಿದಂತೆ ಎಲ್ಲಾ ಕಡೆ ಕಾಂಟ್ರ್ಯಾಕ್ಟ್ ಕ್ಯಾರೇಜಸ್ ಬರುತ್ತಿವೆ. ಸರ್ಕಾರಿ ಬಸ್‌ಗಳು ಲಾಸ್‌ನಲ್ಲಿ ನಡೆಯುತ್ತಿವೆ. ಆ ಬಗ್ಗೆ ಯಾವುದಾದರೊಂದು ಪಾಲಿಸಿ ಡಿಸಿಷನ್ ತೆಗೆದುಕೊಳ್ಳಬೇಕು.

ಶ್ರೀ ಚೆಲುವರಾಯಸ್ವಾಮಿ (ಸಾರಿಗೆ ಸಚಿವರು) ರ ಪರವಾಗಿ ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು): 1976ಕ್ಕಿಂತ ಮೊದಲು ಪ್ರಯಾಣಿಕರನ್ನು ಒಪ್ಪಂದದ ಆಧಾರದ ಮೇಲೆ ಕರೆದೊಯ್ಯಲು ಒಪ್ಪಂದ ವಾಹನ ರಹದಾರಿಗಳನ್ನು ಯಾವುದೇ ನಿರ್ಬಂಧವಿಲ್ಲದೆ ನೀಡಲಾಗುತ್ತಿತ್ತು. ಇಂತಹ ಒಪ್ಪಂದ ವಾಹನಗಳ ಕಾರ್ಯಾಚರಣೆಯನ್ನು ನಿರ್ಬಂಧಿಸಲು 1976ರ ಒಪ್ಪಂದ ವಾಹನಗಳ (ಸ್ವಾಧೀನ) ಕಾಯ್ದೆಯನ್ನು ಜಾರಿಗೆ ತರಲಾಯಿತು.

ಕರ್ನಾಟಕ ಸರ್ಕಾರವು 1976ರ ಒಪ್ಪಂದ ವಾಹನಗಳ (ಸ್ವಾಧೀನ) ಕಾಯ್ದೆಯನ್ನು ಕಾಯ್ದೆ ನಂ: 9/2003 ರಲ್ಲಿ ನಿರಸನಗೊಳಿಸಿದೆ. ಇದು ದಿನಾಂಕ: 01–04–2003 ರಿಂದ ಜಾರಿಗೆ ಬಂದಿದ್ದು, ಈಗ ಸಾರಿಗೆ ಪ್ರಾಧಿಕಾರಗಳು ಒಪ್ಪಂದ ವಾಹನಗಳ ರಹದಾರಿಗಳನ್ನು ನೀಡಲು ನಿರ್ಬಂಧವಿರುವುದಿಲ್ಲ ಹಾಗೂ ಕೇಂದ್ರ ಮೋಟಾರು ವಾಹನ ಕಾಯ್ದೆ, 1988ರ ಕಾನೂನಿನ ಚೌಕಟ್ಟಿನಲ್ಲಿ ಹಲವು ನಿಬಂಧನೆಗೊಳಪಟ್ಟು ಒಪ್ಪಂದ ವಾಹನಗಳ ರಹದಾರಿಗಳನ್ನು ನೀಡಲು ಅವಕಾಶವಿದೆ.

ಹೀಗೆ ನೀಡಲಾದ ಒಪ್ಪಂದ ವಾಹನ ರಹದಾರಿಗಳಲ್ಲಿನ ವಾಹನಗಳು ರಹದಾರಿ ನಿಬಂಧನೆ ಉಲ್ಲಂಘನೆ ಮಾಡಿ ಕಾನೂನು ಬಾಹಿರವಾಗಿ ಸಂಚರಿಸುತ್ತಿರುವುದನ್ನು ತಡೆಗಟ್ಟುವ ದೃಷ್ಟಿಯಿಂದ ಅಂತಹ ವಾಹನಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಸೂಕ್ತ ಕಾನೂನು ಕ್ರಮ ಜರುಗಿಸಲಾಗುತ್ತಿದೆ. ಅದರಂತೆ, ರಹದಾರಿ ನಿಬಂಧನೆ ಉಲ್ಲಂಘನೆ ಮಾಡಿರುವುದಕ್ಕಾಗಿ ದಂಡ ವಿಧಿಸಲಾಗುತ್ತಿದೆ ಹಾಗೂ ರಹದಾರಿಗಳನ್ನು ರದ್ದುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದ್ದು.

ಮುಂದುವರೆದಂತೆ, ಖಾಸಗಿ ಬಸ್ಸುಗಳ ಕಾನೂನು ಬಾಹಿರ ಕಾರ್ಯಾಚರಣೆಯಿಂದ ಉಂಟಾಗುವ ನಷ್ಟದಿಂದ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯನ್ನು ಮುಚ್ಚಲಾಗುವುದೆಂಬ ಅನುಮಾನವನ್ನು ಸಾರ್ವಜನಿಕರಿಂದ ಮತ್ತು ಕಾರ್ಮಿಕ ವರ್ಗದಿಂದ ತೊಡೆದು ಹಾಕುವ ದೃಷ್ಟಿಯಿಂದ ಖಾಸಗಿ ಗುತ್ತಿಗೆ ಬಸ್ಸುಗಳ ಕಾನೂನು ಬಾಹಿರ ಕಾರ್ಯಾಚರಣೆಯನ್ನು ನಿಲ್ಲಿಸುವ ದಿಸೆಯಲ್ಲಿ ಪ್ರವರ್ತನ ಕಾರ್ಯವನ್ನು ಇನ್ನು ಹೆಚ್ಚು ಚುರುಕುಗೊಳಿಸಲು ಸಾರಿಗೆ ಆಯುಕ್ತರಿಗೆ ಸೂಚಿಸಲಾಗಿದೆ. ಬೆಳಗಾಂ ಕಂದಾಯ ವಿಭಾಗದಲ್ಲಿನ ಸಾರ್ವಜನಿಕ ಸಾರಿಗೆಯನ್ನು ಒದಗಿಸುವ ಜವಾಬ್ದಾರಿಯನ್ನು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ವಹಿಸಿಕೊಂಡಿರುತ್ತದೆ ಮತ್ತು ಈ ಸಂಸ್ಥೆಗೆ ಸಾರ್ವಜನಿಕ ಸಾರಿಗೆ ಸೇವೆಗಳನ್ನು ಒದಗಿಸಲು ಪ್ರೋತ್ಸಾಹ ಮತ್ತು ಬೆಂಬಲ ನೀಡುವ ಎಲ್ಲಾ ವಿಧದ ಪ್ರಯತ್ನಗಳನ್ನು ಸರ್ಕಾರವು ಮಾಡುತ್ತಿದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಕೋರಿ, ಮಾನ್ಯ ಮಂತ್ರಿಗಳೆ, ಇದು ಒಂದೊಂದು ಭಾಗದಲ್ಲಿ ಒಂದೊಂದು ರೀತಿಯಲ್ಲಿದೆ. ನಮ್ಮಲ್ಲಿ ಇಂಟರ್ ಸ್ಟೇಟ್ ಸ್ಟೇಜ್ ಕ್ಯಾರೇಜ್ ಪರ್ಮಿಟ್ ಹೋಲ್ಡರ್ಸ್ ಎಂದು ಇದೆ. ಎರಡು ರಾಜ್ಯಗಳು ಸಹಿ ಮಾಡುತ್ತಾರೆ. "ಪಾಕೇಟ್ ಸ್ಕೀಂ ಸೇವ್ಡ್ ಆಪರೇಟರ್ಸ್" ಎಂದು ಕರೆಯುತ್ತೇವೆ. ಅವರಿಗೇನು ಪರ್ಮಿಟ್ ಕಂಡೀಷನ್, ಎಂದರೆ ಒಂದು ಕಡೆಯಿಂದ ಪ್ಯಾಸೆಂಜರ್ಸ್ ಅನ್ನು ಡ್ರಾಪ್ ಮಾಡಿಕೊಂಡು ಬರಬಹುದು, ಪಿಕ್‌ಅಪ್ ಮಾಡುವುದಕ್ಕೆ ಅವಕಾಶವಿಲ್ಲ. ಆದರೆ ಅವರು ಪಿಕ್‌ಅಪ್ ಮಾಡುತ್ತಾರೆ. ಆಮೇಲೆ ಅವರಲ್ಲಿ ಇನ್ನೊಂದು ವ್ಯವಸ್ಥೆ ಇದೆ,

ಮೇನ್ ರೋಡ್‌ನಲ್ಲಿ ಅವರದು ಯಾವ ಬಸ್ ಹೋಗಿ ಬರುತ್ತದೆ, ಅದರ ಹಿಂದೆ ಮುಂದೆ ನಿಮ್ಮ ಬಸ್‌ಗಳ್ಯಾವುವು ಇರುವುದಿಲ್ಲ. ಕೆಎಸ್‌ಆರ್‌ಟಿಸಿಗೆ ಯಾವ ರೀತಿಯ ಟೈಂ ಶೆಡ್ಯೂಲ್ ಸಜೆಸ್ಟ್ ಮಾಡಿರುತ್ತಾರೆಂದರೆ, ಇಲ್ಲಿ ಖಾಲಿ ಹೋಗಬೇಕು ಖಾಲಿ ಬರಬೇಕು. ಆಮೇಲೆ ಈ ರೂಟ್‌ನಲ್ಲಿ ಕಲೆಕ್ಷನ್ ಇಲ್ಲವೆಂದು ರಿಪೋರ್ಟ್ ಹಾಕುವುದು. ಎಲ್ಲಿ ಕಂಪ್ಲೀಟ್ ಪ್ರೈವೇಟ್ ಆಪರೇಟರ್ಸ್ ಬರುವುದಕ್ಕೆ ಅವಕಾಶವಿಲ್ಲ. ಕಾಲೇಜ್‌ಗೆ, ಸ್ಕೂಲ್‌ಗೆ, ಆಸ್ಪತ್ರೆಗೆ ಹೋಗುವುದಕ್ಕೆ ನಮಗೊಂದು ಬಸ್ ಕೊಡಿ ಎಂದು ಹಳ್ಳಿ ಜನರು, ಸಾಯುತ್ತಿರುತ್ತಾರೆ. ಅಲ್ಲಿ ಬಸ್ ಹಾಕುವುದಿಲ್ಲ. ಅಲ್ಲಿ ಟೆಂಪೋ ಟ್ರಾಕ್ಟರ್, ಲಾರಿಗಳ ಮುಖಾಂತರ ಪ್ಯಾಸೆಂಜರ್ಸ್ ಕರೆದುಕೊಂಡು ಹೋಗುತ್ತಾರೆ. ಇದನ್ನು ಡೆಲಿಬರೇಟ್ ಆಗಿ ಮಾಡುತ್ತಾರೆ. ಕೆಎಸ್‌ಆರ್‌ಟಿಸಿನಲ್ಲಿ ಏನಾಗುತ್ತದೆಂದರೆ, ಮೇಲ್ವರ್ಗದಲ್ಲಿರುವವರಿಗೆ ಕೆಳಹಂತದ ಈ ಆಪರೇಷನ್ಸ್ ಅರ್ಥವಾಗುವುದಿಲ್ಲ. ಅವರು ಬಹಳ ಪ್ರಿನ್ಸಿಪಲ್ಡ್ ಆಗಿ ಮಾತನಾಡುತ್ತಾರೆ. ಕೆಳಹಂತದಲ್ಲಿ ಮೋಟರ್ಸ್ ವೆಹಿಕಲ್ ಡಿಪಾರ್ಟ್‌ಮೆಂಟ್‌ನವರು, ಪೊಲೀಸ್ ಇಲಾಖೆಯವರು ಪರಸ್ಪರ ಶಾಮೀಲಾಗಿ ಇದನ್ನು ನಡೆಯುವುದಕ್ಕೆ ಬಿಡುತ್ತಿದ್ದಾರೆ. ಜನಪ್ರತಿ ನಿಧಿಗಳ ಕಷ್ಟವೇನೆಂದರೆ, ಒಂದು ವೇಳೆ ಇದರ ಮೇಲೆ ಕ್ರಮ ಜರುಗಿಸಿ ಎಂದು ಹೇಳಿದರೆ, ಈ ವೆಹಿಕಲ್ಸ್‌ಗಳನ್ನು ಪೊಲೀಸ್ ಮತ್ತೊಬ್ಬರು ಸ್ಟಾಪ್ ಮಾಡಿದರೆ, ಅವರೇ ಜನರಿಗೆ ಎತ್ತಿಕೊಡುತ್ತಾರೆ. "ನೋಡಪ್ಪ ನಿಮ್ಮ ಎಂಎಲ್‌ಎ ಗಲಾಟೆ ಮಾಡಿದರು ಅದರಿಂದ ನಿಮ್ಮ ಬಸ್ ನಿಲ್ಲಿಸಿದ್ದೇವೆ" ಎನ್ನುತ್ತಾರೆ. ಕೆಎಸ್‌ಆರ್‌ಟಿಸಿ ಬಸ್ ಬರುವುದಿಲ್ಲ. ಇವನು ಹೋಗುವಂತಿಲ್ಲ ಜನರು ಎಲ್ಲಿ ಅಂದರೆ ಅಲ್ಲಿ ನಿಂತಿರುತ್ತಾರೆ, ಅವರು ನಮಗೆ ಶಾಪ ಹಾಕುತ್ತಾರೆ. ನಾವೇ ನಾವಾಗಿ ಅವರ ಪರ ಹೇಳಬೇಕು ಆ ರೀತಿಯ ಪರಿಸ್ಥಿತಿಯನ್ನು ನಿರ್ಮಾಣ ಮಾಡುತ್ತಾರೆ. ಅದಕ್ಕೆ ನಾನು ತಮ್ಮಲ್ಲಿ ವಿನಂತಿ ಮಾಡಿಕೊಂಡೆ, ಒಂದು ಸಲ ಸಭೆ ಕರೆದು ಮಾತನಾಡಿ, ನಿಮಗೆ ಆ ಕಷ್ಟ ಗೊತ್ತಿಲ್ಲ ಕಾರಿನಲ್ಲಿ ಬರುತ್ತೀರಿ ಹೋಗುತ್ತೀರಿ.

ಶ್ರೀ ವಾಟಾಳ್ ನಾಗರಾಜ್: ಅಲ್ಲಿ ಖಾಸಗಿ ಬಸ್‌ನವರದು ಹಗಲು ದರೋಡೆ ನಡೆಯುತ್ತಿದೆ. ಪಾಪ ಮಾನ್ಯ ಚೆಲುವರಾಯ ಸ್ವಾಮಿಯೇ ಈ ಭೂಮಿಗೆ ಇಳಿದು ಅದನ್ನು ಸರಿಪಡಿಸುವುದಕ್ಕಾಗುವುದಿಲ್ಲ. ವೈರಮುಡಿಯನ್ನು ಬಿಟ್ಟು ಬಂದರೂ ಸರಿಪಡಿಸುವುದಕ್ಕಾಗುವುದಿಲ್ಲ. ತಾವು ನೋಡಬೇಕು, ಕಲಾಸಿಪಾಳ್ಯ, ಸುಭಾಷ್ ನಗರದಲ್ಲಿ ನೋಡಬೇಕು, ಎಷ್ಟು ಬಸ್‌ಗಳು ಒಂದೇ ಪರ್ಮಿಟ್ ಇಡೀ ಎಂಟು ವರ್ಷ ಅದರಲ್ಲಿ ಓಡಿಸುತ್ತಾರೆ ಮತ್ತೆ ಅವರೆಲ್ಲಾ ರಾಜಕಾರಣಕ್ಕೆ ಬರುತ್ತಾರೆ. ಪಕ್ಷದ ಮುಖಂಡರುಗಳು, ನಮ್ಮ ಹಣೆಬರಹ ಹೀಗಾಗಿದೆ. ಮಾನ್ಯ ಚೆಲುವರಾಯಸ್ವಾಮಿಯವರ ಬಗ್ಗೆ ಬಹಳ ಗೌರವವಿದೆ, ನಿಮ್ಮ ಕೈಯಲ್ಲೂ ಸಾಧ್ಯವಿಲ್ಲ. ಯಾರ ಕೈಯಲ್ಲೂ ಸಾಧ್ಯವಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ (ಭಾರಿ ನೀರಾವರಿ ಮಂತ್ರಿಗಳು): ಸರ್, ಮಾನ್ಯ ವಾಟಾಳ್‌ನಾಗರಾಜ್‌ರವರು ಪರ್ಮಿಟ್ ಇಲ್ಲದೆ ಹೊಡೆಯುತ್ತಿದ್ದಾರೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಇವತ್ತು ಕರೆಕ್ಟ್ ಆಗಿ ಹೇಳಿದಿರಿ. ತಮಗೆ ನನ್ನ ಅಭಿನಂದನೆಗಳು.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್‌ನಾಗರಾಜ್‌ರವರು ಹೇಳಿದರು. ಈ ಪ್ರೈವೇಟ್ ಬಸ್‌ನವರು ರಾಜಕೀಯಕ್ಕೆ ಬರುತ್ತಾರೆ. ಮುಖಂಡರುಗಳಾಗುತ್ತಾರೆಂದು ಹೇಳಿದರು. ದಯಮಾಡಿ ಯಾರೆಂದು ಅವರು ಸ್ಪಷ್ಟಪಡಿಸಬೇಕು. ಇಲ್ಲಿ ಬಂದು ಅವರು ರಾಜಕಾರಣ ಮಾಡಬಾರದು ಎಂದು ಏನಾದರೂ ನಿಯಮ ಇದೆಯಾ, ಅದನ್ನು ಕೂಡ ಹೇಳಬೇಕಲ್ಲ. ಅವರು ಮಾಡಬಾರದಾ? ಇಲ್ಲಿ ಎಂಎಲ್‌ಎಗಳಾಗಿ ಯಾರಾದರೂ ಅಂತಹವರು ಇದ್ದಾರಾ ದಯಮಾಡಿ ಇಲ್ಲಿ ಸ್ಪಷ್ಟಿಕರಿಸಬೇಕು.

ಶ್ರೀ ಎಂ.ಪಿ. ವೆಂಕಟೇಶ್: ಖಾಸಗಿ ಬಸ್‌ಗಳು ಓಡಾಡುವುದಕ್ಕೆ ಅವಕಾಶ ಮಾಡಿಕೊಟ್ಟವರು ಕಾಂಗ್ರೆಸ್ ಗೌರ್ನಮೆಂಟ್‌ನವರು.

ಅಧ್ಯಕ್ಷರು: ಅಕ್ರಮ ಚಟುವಟಿಕೆ ಮಾಡುವವರ ಕೈಮೇಲಾಗಿದೆ ಎನ್ನುವ ಮಾತನ್ನು ಹೇಳುತ್ತಿದ್ದಾರಷ್ಟೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಈ ಕಾಂಟ್ರಾಕ್ಟ್ ಕ್ಯಾರೇಜ್ ಇದೆಯಲ್ಲಾ, ಬಹಳ ತಮಾಷೆ. ಒಂದು ಮದುವೆ ಪಾರ್ಟಿಯವರು ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗಬೇಕು. ಅವರು ಕಾಂಟ್ರಾಕ್ಟ್ ಮಾಡಿಕೊಂಡಿರುತ್ತಾರೆ. ಅದಕ್ಕೊಂದು ಸ್ಪೆಶಲ್ ಪರ್ಮಿಟ್ ತೆಗೆದುಕೊಂಡು ಅವರನ್ನು ಕರೆದುಕೊಂಡು ಹೋಗುವುದು ಬಿಡುವುದು ಅಥವಾ ಯಾವುದೋ ಒಂದು ಟೂರಿಸ್ಟ್ ಸೆಂಟರ್‌ಗೋ ಒಂದು ಯಾತ್ರಾ ಸ್ಥಳಕ್ಕೋ ಹೋಗುವುದು. ಇವರು ಕಾಂಟ್ರಾಕ್ಟ್ ಕ್ಯಾರೇಜ್ ಎಂದು ಒಂದು ಸ್ಥಳಕ್ಕೆ ಪರ್ಮಿಟ್ ತೆಗೆದುಕೊಂಡು ಬಿಟ್ಟು, ರೆಗ್ಯುಲರ್ ಆಪರೇಟರ್ಸ್ ಆಗಿಬಿಟ್ಟಿದ್ದಾರೆ. ಹೇಗೆ ಮಾಡಿದ್ದಾರೆ, ಇದು ಹೇಗೆ ನಡೆಯಿತು? ಮೋಟರ್ ವೆಹಿಕಲ್ಸ್ ಇಲಾಖೆಯವರು ಪೊಲೀಸ್ ಇಲಾಖೆಯವರ ಪರಸ್ಪರ ಒಪ್ಪಂದ ಇಲ್ಲದೆ ಹೋದರೆ ಈ ರೀತಿ ನಡೆಯಲು ಸಾಧ್ಯವಿಲ್ಲ.

ಶ್ರಿ ಜೆ.ಸಿ. ಮಾಧುಸ್ವಾಮಿ: ಅಕ್ರಮ ಸಕ್ರಮ ಪದವನ್ನು ನಾವಿಲ್ಲಿ ಉಪಯೋಗ ಮಾಡಿಲ್ಲ, ಅದನ್ನು ಎಲ್ಲದಕ್ಕೂ ಅನ್ವಯಿಸಿಕೊಳ್ಳಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಬೇರೆ ಯಾರಾಗಿದ್ದರೂ ನಾನು ಹೇಳುತ್ತಿದ್ದೆ. ಮಾನ್ಯ ಚೆಲುವರಾಯ ಸ್ವಾಮಿಯವರ ತಾಳ್ಮೆ, ಜಾಣ್ಮೆ, ಧೈರ್ಯವೆಲ್ಲಾ ನನಗೆ ಗೊತ್ತಿದೆ. ಅವರು ಮನಸ್ಸು ಮಾಡಬೇಕು ಅಷ್ಟೆ. ಅವರು ಮನಸ್ಸು ಮಾಡಿದರೆ ಇದನ್ನು ಕಂಟ್ರೋಲ್ ಮಾಡಬಹುದು.

ಶ್ರೀ ವಾಟಾಳ್‌ನಾಗರಾಜ್: ಅದು ಅವರೊಬ್ಬರ ಕೈಯಲ್ಲಾಗುತ್ತದೆಯೆ?

ಶ್ರೀ ಕೆ.ಆರ್. ರಮೇಶ್‌ಕುಮಾರ್: ಸಾವಿರ ಜನರು ಸಾವಿರ ಹೇಳಿದರೆ, ನಾನು ನಂಬುವುದಿಲ್ಲ. ಅವರ ಮೇಲೆ ನನಗೆ ವಿಶೇಷವಾದ ನಂಬಿಕೆ ಇದೆ. ಅವರು ಹ್ಯಾಂಡ್ಲ್ ಮಾಡುತ್ತಾರೆ. ಇವರು ತಕ್ಷಣಕ್ಕೆ ಕೆಲವು ಕಡೆ ಸರ್‌ಪ್ರೈಸ್ ಇನ್‌ಸ್ಪೆಕನ್ಸ್ ಮಾಡಿ, ಅಷ್ಟು ಕಡೆದ ಆಫೀಸರ್ಸ್‌ಗಳನ್ನು ಸಸ್ಪೆಂಡ್ ಮಾಡುವುದು, ಒಂದಷ್ಟು ಅಪರೇಷನ್ಸ್ ಅನ್ನು ಸ್ವಾಪ್ ಮಾಡುವುದನ್ನು ಮಾಡಿದರೆ ಕಂಟ್ರೋಲ್‌ಗೆ ಬರುತ್ತದೆ. ಇಲ್ಲದೆ ಹೋದರೆ ಏನಾಗುತ್ತದೆಂದರೆ, ಒಂದು ಕಡೆಗೆ ರಾಷ್ಟ್ರೀಕರಣವೆಂದು ಹೇಳಿ, ರಾಷ್ಟ್ರೀಕೃತ ಸಂಸ್ಥೆಯಲ್ಲಿ ಕೆಲಸ ಮಾಡುವವರಿಗೆ, ಅಭದ್ರತೆ, ಜನರಿಗೆ ಅಸೌಕರ್ಯ ಆ ಒಂದು ಸಿದ್ಧಾಂತವನ್ನೆ ಸರ್ವನಾಶ ಮಾಡುವುದು.....

ಅಧ್ಯಕ್ಷರು: ಮಾನ್ಯ ರಮೇಶ್ ಕುಮಾರ್‌ರವರೆ, ಇದಕ್ಕೆ ಪರಿಹಾರವೇನು ಎಂಬುದನ್ನು ಹೇಳಿಬಿಡಿ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಪರಿಹಾರ ಹೇಳುತ್ತಿದ್ದೇನಲ್ಲ, ಅವರು ಚುರುಕಾಗಿ ಕೆಲಸ ಮಾಡಬೇಕು. ಯಾರು ಅಕ್ರಮವಾಗಿ ಇದನ್ನು ನಡೆಸುತ್ತಿದ್ದಾರೆ, ಆ ಅಧಿಕಾರಿಗಳನ್ನು ಬಲಿ ಹಾಕಬೇಕು. ಅಂತಹ ಕಡೆ ಬಸ್‌ಗಳನ್ನು ಸೀಜ್ ಮಾಡಬೇಕು. ಕೆಎಸ್‌ಆರ್‌ಟಿಸಿಯವರು ಕೂಡಲೇ ಅಂತಹ ಕಡೆಗೆ ಕೆಲವು ಬಸ್‌ಗಳನ್ನು ಬಾಡಿಗೆ ತೆಗೆದುಕೊಂಡಾದರೂ ಬಸ್‌ಗಳ ವ್ಯವಸ್ಥೆ ಮಾಡಬೇಕು. ಮಾಡಿದರೆ ಜನರಲ್ಲಿ ಹೊಸ ನಂಬಿಕೆ, ವಿಶ್ವಾಸ ಬರುತ್ತದೆ. ಈಗ ಸರ್ಕಾರ ಬದಲಾಗಿದೆ. ಅದಕ್ಕೆ ಹೊಸ ಕುರುಹು ಏನು, ಮಾನ್ಯ ಈಶ್ವರಪ್ಪ, ಶೆಟ್ಟರ್ ತಾವೆಲ್ಲಾ ಇದ್ದೀರಿ, ಇಲ್ಲಿದ್ದವರು ಅಲ್ಲಿ ಹೋಗಿದ್ದೀರಿ. ಹೊಸ ಸರ್ಕಾರ ಬಂತು, ಜನರಿಗೆ ಒಳ್ಳೆಯ ಬೆನಿಫಿಟ್ ಆಯಿತು. ಒಳ್ಳೆಯ ಆಡಳಿತ ನಡೆಸಿದರೆಂದು ಜನರಿಗೆ ಗೊತ್ತಾಗುವುದು ಹೇಗೆ, ಇವನ್ನೆಲ್ಲಾ ಮಾಡಿದರೆ ಪರವಾಗಿಲ್ಲಪ್ಪ ಅಂದುಕೊಳುತ್ತಾರೆ. ಇಲ್ಲದಿದ್ದರೆ, ಯಾರು ಬಂದರೂ ಒಂದೇ ಬಿಡಪ್ಪ. ಬ್ರೇಕ್ ಇನ್‌ಸ್ಪೆಕ್ಟರ್‌ಗೆ ಮಾಮೂಲಿ ಇದ್ದೇ ಇದೆ. ಸಬ್‌ಇನ್‌ಸ್ಪೆಕ್ಟರ್‌ಗೆ ಮಾಮೂಲಿ ಇದ್ದೇ ಇದೆ ಎಂದು ಜನರು ಹೇಳುತ್ತಾರೆ. ಮತ್ತೆ ಯಥಾ ಪ್ರಕಾರ, ಅದೃಷ್ಟ ಎಲೆಕ್ಷನ್ ಟೈಂಗೆ ಸೆಕೆಂಡ್ಸ್ ಅಡ್ಜಸ್ಟ್ ಮಾಡುವುದು ಅದು ಇದು ಆಗುತ್ತದೆ; ನೀವು ಕೆಲಸ ಮಾಡಿ.

ಮಾನ್ಯ ಸದಸ್ಯರೊಬ್ಬರು: ಮಾನ್ಯ ರಮೇಶ್ ಕುಮಾರ್‌ರವರೆ, ನಾವು ಇದನ್ನೆಲ್ಲಾ ಮಾಡಿದರೆ ನೀವು ಇನ್ನು 10 ವರ್ಷ ವಿರೋಧಪಕ್ಷದಲ್ಲೆ ಕುಳಿತುಕೊಳ್ಳಬೇಕಾಗುತ್ತದೆ.

ಶ್ರೀ ಡಿ.ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಸರ್ಕಾರದ ಗಮನಕ್ಕೆ ಬಂದಿದೆಯೋ, ಇಲ್ಲವೋ ಗೊತ್ತಿಲ್ಲ. ಈ ಕಾಂಟ್ರಾಕ್ಟ್ ಕ್ಯಾರೇಜ್‌ನವರು ಟೈಂಟೇಬಲ್ ಹಾಕಿ ಬಸ್ ಓಡಿಸುತ್ತಾರೆ. ಕಾಂಟ್ರಾಕ್ಟ್ ಕ್ಯಾರಿಯೇಜ್‌ನವರು ಟೈಮ್‌ಟೇಬಲ್ ಹಾಕಿ ಬಸ್ ಓಡಿಸುವುದು ರಾಜಾರೋಷವಾಗಿ ನಡೆಯುತ್ತಿದೆ. ಅದನ್ನು ತಪಾಸಣೆ ಮಾಡುವಂತಹ ನಿಮ್ಮ ಇಲಾಖೆಯ ಅಧಿಕಾರಿಗಳು ಕಣ್ಣು ಮುಚ್ಚಿಕೊಂಡು ಕುಳಿತಿರುತ್ತಾರೆ. ಅವರಿಗೆಲ್ಲಾ ಮಂತ್ರಿ ಮಾಮೂಲು ಫಿಕ್ಸ್ ಮಾಡಿರುತ್ತಾರೆ. ಅವರು ಮಾತನಾಡುತ್ತಾರೆ. ಪಬ್ಲಿಕ್ ಆಗಿ ಮಾತನಾಡುತ್ತಾರೆ. ನಾವು ತಿಂಗಳಿಗೆ ಇವರಿಗೆ ಇಷ್ಟು ಕೊಡುತ್ತೇವೆ. ಇಷ್ಟು ಅವರಿಗೆ ಕೊಡುತ್ತೇವೆಂದು ಮಾತನಾಡುತ್ತಾರೆ. ಅದಕ್ಕೆ ಮಾನ್ಯ ಸಭಾಧ್ಯಕ್ಷರು ಒಂದು ಮಾತನ್ನು ಹೇಳಿದರು. ಅದಕ್ಕೆ ಏನು ಸೂಚನೆ ಕೊಡಿ, ಪರಿಹಾರ ಸೂಚಿಸಿ ಎಂದರು. ನಮ್ಮಂಥ ಪಬ್ಲಿಕ್ ಹೋಗಿ ಕಾನೂನು ಬಾಹಿರವಾಗಿ ಓಡುವಂತಹ ಇಂತಹ ಬಸ್ಸನ್ನು ನಿಲ್ಲಿಸಿದೆವು ಅಂದರೆ.....

ಅಧ್ಯಕ್ಷರು : ಈಗ ನಾನು ಹೇಳುವುದು ಏನೆಂದರೆ ಈ ಸಭೆಯ 225 ಜನರೂ ಶಪಥ ಮಾಡಿದರೆ, ಮಾತ್ರ ಇವೆಲ್ಲಾ ಸಮಸ್ಯೆಗಳು ನಿವಾರಣೆ ಆಗುತ್ತದೆ. ಇಲ್ಲಿ ಡಿಸ್ಕಸ್ ಮಾಡುವುದು ಅಲ್ಲಿ ಹೋಗಿ ನಮ್ಮವನು ಬಿಡಿ ಎಂದು ಹೇಳುವುದು. ನೀವು ಮಾಡಿರಿ ಎಂದು ಹೇಳುವುದು. ಅದ್ಯಾರೋ ಹೇಳಿದ ಹಾಗೆ "ನೀವು ಇದ್ದಾಗ ಏನು ಮಾಡಿದಿರಿ" ಎಂದು ಹೇಳುವುದು? ಈ ತರಹ ಆಗಿ ಈ ಸಮಸ್ಯೆಗಳು ಹಿಮಾಲಯದ ಎತ್ತರಕ್ಕೆ ಬೆಳೆದು ಬಿಟ್ಟಿದೆ. ನೀವೆಲ್ಲಾ ಶಪಥ ಮಾಡಿದರೆ ಈ ಸಮಸ್ಯೆ ಪರಿಹಾರ ಆಗುತ್ತದೆ. ಇದೇನೂ ದೊಡ್ಡದು ಅಲ್ಲ.

ಶ್ರೀ ಎಸ್.ಎಸ್. ಪಾಟೀಲ್: ನಮ್ಮ ಕಡೆ ಬಹಳ ಕಷ್ಟ ಇದೆ.

ಶ್ರೀ ಡಿ.ಆರ್. ಪಾಟೀಲ್: ಮಾನ್ಯ ಪಾಟೀಲ್‌ರವರೆ, ಇದು ಮುಗಿಯಲಿ, ಮಾತನಾಡೋಣ. ಪರಿಹಾರ ಸೂಚಿಸಬೇಕು. ಈಗ ನಮ್ಮಂಥವರು ನಾಗರೀಕರು ಹೋಗಿ ಒಂದು ಖಾಸಗಿ ಬಸ್ಸನ್ನು ನಿಲ್ಲಿಸುತ್ತೇವೆ. ಗೈರು ಕಾನೂನು ನಡೆಯುವಂತಹ ಬಸ್ಸನ್ನು ನಿಲ್ಲಿಸಿದೆವು ಎಂದು ಇಟ್ಟುಕೊಳ್ಳೋಣ. ಅದು ಗೈರು ಕಾನೂನಿನಿಂದ ನಡೆಯುತ್ತದೆ ಎಂದು ಹೇಳಿ ವಿಚಾರದಿಂದ ಸಾಬೀತು ಆಯಿತು ಎಂದರೆ, ಅದನ್ನು ನಿಲ್ಲಿಸಬೇಕಾದಂತಹ ಅಧಿಕಾರಿಯನ್ನೂ ನೀವು ಇಮ್ಮೀಡಿಯಟ್ ಆಗಿ ಸಸ್ಪೆಂಡ್ ಮಾಡಬೇಕು. ಆಗ ಬಿಸಿ ಹತ್ತುತ್ತದೆ. ಇಲ್ಲ ಎಂದರೆ ಇವರೆಲ್ಲಾ ಮಾಮೂಲು ಕಲೆಕ್ಟ್ ಮಾಡಿಕೊಳ್ಳುತ್ತಾ ಹಾಗೆಯೇ ನಡೆಯುತ್ತಾರೆ. ಅದಕ್ಕೆ ದಯವಿಟ್ಟು ಈ ಕೆಲಸವನ್ನು ನೀವು ಬಹಳ ತ್ವರಿತವಾಗಿ ಮಾಡಬೇಕು. ನಮ್ಮಲ್ಲಿ ನಾವು ಪ್ರತಿ ದಿವಸ ಈ ರೀತಿ ಆಗುವುದನ್ನು ನೋಡುತ್ತೇವೆ. ಏನಪ್ಪ ಇಷ್ಟು ರಾಜಾರೋಷವಾಗಿ ನಡೆಯುತ್ತಿದೆ. ಯಾರೂ ನಿಲ್ಲಿಸಲಿಕ್ಕೆ ಸಾಧ್ಯ ಇಲ್ಲದಂತಹ ಪರಿಸ್ಥಿತಿಗೆ ಬಂದಿದ್ದೇವಲ್ಲ ಎಂದು ಅನಿಸುತ್ತದೆ. ಏಕೆಂದರೆ ಅಷ್ಟು ಆ ಪ್ರಮಾಣದಲ್ಲಿ ಅವರು ಕೊಡುತ್ತಾರೆ, ಮತ್ತು ಸಾಹೇಬರು ಹೇಳಿದ ಹಾಗೆ ಅವರೂ ಯಾರೋ ನಮ್ಮ ಅಣ್ಣ, ತಮ್ಮ, ಅಳಿಯ, ಮಾವ ಇವರೇ ಇರುತ್ತಾರಲ್ಲ. ಮತ್ತೆ ನಮ್ಮಂಥವರನ್ನು ಹೇಗೋ ಸುತ್ತು ಹಾಕಿಕೊಂಡು ಬಂದು ವ್ಯವಹಾರ ಮಾಡುತ್ತಾರೆ. ಅದಕ್ಕೆ ದಯವಿಟ್ಟು ಸ್ಟ್ರಿಕ್ಟಾಗಿ ನೀವು ನಿಮ್ಮ ಟ್ರಾನ್ಸ್‌ಪೋರ್ಟ್ ಕಮೀಷನರ್ ಅವರನ್ನು ಇವತ್ತು ಇಮ್ಮೀಡಿಯಟ್ ಅಲ್ಲಿ ಹೋಗಲು ಹೇಳಿ. ಅವರು ಹೋಗಬೇಕು. ಹೋಗಿ ಅಲ್ಲಿ ಉಪವಾಸ ಕುಳಿತವರ ಜೊತೆ ಮಾತನಾಡಿ ಈ ರೀತಿ ನಾಳೆಯಿಂದ ಆಗಲಾರದ ಹಾಗೆ "ನಾನು ಕ್ರಮ ತೆಗೆದುಕೊಳ್ಳುತ್ತೇನೆ" ಎಂದು ಹೇಳಿ ಅವರು ಉಪವಾಸ ಸತ್ಯಾಗ್ರಹದಿಂದ ಅವರನ್ನು ಎಬ್ಬಿಸಬೇಕು. ಆರನೇ ದಿವಸ ಇವತ್ತು ಉಪವಾಸ ಸತ್ಯಾಗ್ರಹ ನಡೆಯುತ್ತಿದೆ. ಅವರನ್ನು ಎಬ್ಬಿಸಬೇಕು. ಆಮೇಲೆ ಅವರನ್ನು, ನಿಮ್ಮ ಅಧಿಕಾರಿಗಳನ್ನು ಸೇರಿಸಿ ಸಭೆ ಮಾಡಬೇಕು. 10, 11, 12ನೇ ತಾರೀಖು ಒಂದು ಸಭೆಯನ್ನು ನೀವು ಇಲ್ಲಿ ಕರೆಯಿರಿ. ಇವನ್ನೆಲ್ಲಾ ಹೇಗೆ ನಿಲ್ಲಿಸಬೇಕು ಎನ್ನುವುದರ ಬಗ್ಗೆ ನಾವೂ ನೀವು ಚರ್ಚೆ ಮಾಡಿ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ನೀವು ತಯಾರಾಗಲಿಲ್ಲ ಎಂದರೆ ನಿಜವಾಗಿಯೂ ಬಹಳ ತೊಂದರೆಗೆ ನಾವೆಲ್ಲರೂ ಈಡಾಗುತ್ತೇವೆ. ಸಾರ್ವಜನಿಕವಾಗಿ ಜನ ಪ್ರತಿನಿಧಿಗಳು ಸಾರ್ವಜನಿಕರನ್ನು ಫೇಸ್ ಮಾಡಲಾರದಂತಹ ಪರಿಸ್ಥಿತಿ ನಿರ್ಮಾಣ ಆಗುತ್ತದೆ. ಏಕೆ ಸ್ವಾಮಿ ಇದು? ಇನ್ನೊಂದು ಮೂರು ನಾಲ್ಕು ವರ್ಷವಾದ ಕೂಡಲೇ ಅವರೇ ದೊಡ್ಡವರಾಗಿ ಇಲ್ಲಿ ಬಂದು ಕೂರುವಂತಹ ಪ್ರಸಂಗ ಬರುತ್ತವೆ. ನಾವು ನೀವು ಮನೆ ಹಿಡಿದು ಕೂಡುವುದು ಆಮೇಲೆ. ಬಹಳ ಅಂದರೆ ಉಪವಾಸ ಕೂಡುವುದು ಇಂತಹ ಪ್ರಸಂಗ ಬರುತ್ತದೆ. ದಯವಿಟ್ಟು ಅಲ್ಲಿ ನೋಡಿರಿ. ಒಬ್ಬರು ಡೆಪ್ಯುಟಿ ಕಮೀಷನರ್ ಅವರನ್ನು ಬಿಟ್ಟರೆ ಯಾರಿಗೂ ಅಥಾರಿಟಿ ಇಲ್ಲ. ಸುಮ್ಮನೇ ಲಾ ಅಂಡ್ ಆರ್ಡರ್ ಸಿಚುಯೇಷನ್ ಇದೆ ಎಂದು ಹೇಳಿ. ರಿಪೋರ್ಟ್ ಮಾಡಬಹುದು. ಅವರನ್ನು ಬಿಟ್ಟರೆ ರಾಜ್ಯ ಪ್ರಶಸ್ತಿ ವಿಜೇತ ಶ್ರೀ ತೊಂಟೇಶ ಶೆಟ್ಟಿಯವರು ಉಪವಾಸ ಕೂರುತ್ತೇನೆಂದು ನೋಟೀಸ್ ಕೊಟ್ಟರು. ಉಪವಾಸ ಕುಳಿತು ಇವತ್ತು ಆರನೇ ದಿವಸ. ಯಾರೂ ಹೋಗಿ ಭೇಟಿ ಆಗುವ ಸೌಜನ್ಯನೂ ಆಡಳಿತಕ್ಕೆ ಇಲ್ಲ

ಎಂದರೆ ಏನು ಅನಿಸುತ್ತದೆ. ಏನು ಮಾಡಬೇಕು ಎಂದು ಹೇಳುತ್ತೀರಿ? ಜನ ಏನು ಮಾಡಬೇಕು. ಅವರಿಗೇ ಹೋಗಿ ಶರಣಾಗಬೇಕು.

ಅಧ್ಯಕ್ಷರು: ಮಾನ್ಯ ಪಾಟೀಲ್ ಅವರೇ, ಉಪವಾಸ ಎಲ್ಲಾ ಔಟ್‌ಡೇಟೆಡ್ ಆಗಿ ಹೋಯಿತು. ಯಾರೂ ಸೀರಿಯಸ್ಸಾಗಿ ತೆಗೆದುಕೊಳ್ಳುತ್ತಿಲ್ಲ.

ಶ್ರೀ ಡಿ.ಆರ್. ಪಾಟೀಲ್: ಸಾಹೇಬರೇ, ಈ ನೋಟೀಸ್ ಕೊಟ್ಟ ಮೇಲೆ ಆ ಕಾಂಟ್ರಾಕ್ಟ್ ಕ್ಯಾರಿಯೇಜ್ ಮಾಲೀಕ ಎರಡು ಲಕ್ಷ ರೂಪಾಯಿ ತಂದು ನೀವು ಉಪವಾಸ ಕೂಡಬೇಡಿ ಎಂದು ಹೇಳಿ ಅವರ ಮನೆಗೆ ಬಂದ. ಅಂದರೆ ಯಾವ ಮಟ್ಟಕ್ಕೆ ಅವರು ಹೋಗುತ್ತಾರೆ. ಮತ್ತೆ ದುರ್ದೈವದಿಂದ ನಮ್ಮ ಸ್ನೇಹಿತರು ಗಮನದಲ್ಲಿಟ್ಟುಕೊಳ್ಳಬೇಕು. ಆ ಬಸ್ ಆಕ್ಸಿಡೆಂಟ್ ಆದರೆ ಒಂದೂ ಪೇಪರಿನಲ್ಲಿ ರಿಪೋರ್ಟ್ ಆಗುವ ಹಾಗೆ ಇಲ್ಲ ನೋಡಿ. ಏನು ಮ್ಯಾನೇಜ್‌ಮೆಂಟ್ ಅವರದ್ದು ಗೊತ್ತೇ? ಮತ್ತೆ ಅವರು ನಮ್ಮ ಸ್ಟೇಟ್‌ನವರಲ್ಲ. ಹೋಗಲಿ ನಮ್ಮ ಸ್ಟೇಟ್‌ನವರು ದುಡಿದುಕೊಳ್ಳುತ್ತಾರೆಂದರೆ ನಮ್ಮ ಸ್ಟೇಟ್‌ನವರಲ್ಲ, ಹೊರಗಿನವರು "ನಿಮಗೆ ಎಷ್ಟು ಬೇಕು ಕೇಳಿರಿ" ಎಂದು ಹೇಳುತ್ತಾರೆ. ಓಪನ್ ಆಗಿ ಕೇಳುತ್ತಾರೆ. "ನಿಮಗೆ ಎಷ್ಟು ಬೇಕು" ಎನ್ನುತ್ತಾರೆ. "ಸುಮ್ಮನೇ ಇದ್ದು ಬಿಡಿ" ಎನ್ನುತ್ತಾರೆ. ಇಷ್ಟು ಈ ಮಟ್ಟಕ್ಕೆ ನಾವು ಆಡಳಿತವನ್ನು ತಂದರೆ ಸಾರ್ವಜನಿಕ ಜೀವನವನ್ನು ನಾವು ಎಲ್ಲಿಗೆ ಒಯ್ಯುತ್ತಿದ್ದೇವೆ? ನಾವೇಕೆ ಮೂಕ ಪಶುಗಳಾಗಿ ಇರಬೇಕು. ಇವತ್ತೇನೋ ಮಾನ್ಯ ಚೆಲುವರಾಯಸ್ವಾಮಿಯವರಿಗೆ ಅಧಿಕಾರ ಇದೆ ಎಂದು ಹೇಳಿ ಗೌರವ ಕೊಟ್ಟು ನಡೆಯುತ್ತಾರೆ. ನಾವು ಇದನ್ನು ಹೀಗೆಯೇ ಬಿಟ್ಟರೆ ನಾಳೆ ಈ ಅಧಿಕಾರವೂ ನಿಮ್ಮಂಥವರಿಗೆ ಸಿಗಲಾರದಂತಹ ಒಂದು ವ್ಯವಸ್ಥೆ ರೂಪುಗೊಳ್ಳುತ್ತದೆ. ಬಹುತೇಕ ನಿಮ್ಮ ಅನುಭವಕ್ಕೆ ಈಗ ಬಂದಿರಬೇಕು. 4–5 ತಿಂಗಳ ಆಡಳಿತದೊಳಗೆ ನಿಮಗೆ ಅನುಭವಕ್ಕೆ ಬಂದಿರಬೇಕು. ಯಾರ ಮಾತಿಗೆ ಹೆಚ್ಚು ಕಿಮ್ಮತ್ತು ಇರುತ್ತದೆ ಎಂದು. ಇದಕ್ಕೆ ನಾವು ಅವಕಾಶ ಕೊಡುವುದು ಬೇಡ. ಇದಕ್ಕೆ ಯೀಲ್ಡ್ ಆಗುವುದು ಬೇಡ. ಅದಕ್ಕೆ ಬಹಳ ಕಠಿಣ ಕ್ರಮಗಳನ್ನು, ತೀವ್ರವಾಗಿ ನೀವು ತೆಗೆದುಕೊಳ್ಳುತ್ತೀರಿ ಎಂದು ಹೇಳಿ ಒಂದು ಭರವಸೆ ನನ್ನಲ್ಲಿ ಇದೆ. ಇವತ್ತೇ ಟ್ರಾನ್ಸ್‌ಪೋರ್ಟ್ ಕಮೀಷನರ್ ಅವರೇ ಹೋಗಬೇಕು. ಹೋಗಿ ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಬೇಕು. ಅಲ್ಲಿನ ಸಿಚುಯೇಷನ್ ಅನ್ನು ರಿವ್ಯೂ ಮಾಡಬೇಕು. ನಾಳೆಯಿಂದ ಆ ಭಾಗದಲ್ಲಿ ಇದು ನಡೆಯಲಾರದ ಹಾಗೆ ಕ್ರಮ ಕೈಗೊಳ್ಳಿ. ಮುಂದೆ ನೀವು 11, 12ನೇ ತಾರೀಖಿಗೆ ಒಂದು ಮೀಟಿಂಗ್ ಕರೆಯಿರಿ. ಕರೆದು ಆ ಚರ್ಚೆಯ ನಂತರ ಏನೇನು ಸಲಹೆಗಳು ಬರುತ್ತವೆ? ಪರಿಹಾರಗಳನ್ನು ಕಂಡುಕೊಂಡು ಇದು ಒಂದರೊಳಗೆ ನೀವು ಕಟ್ಟುನಿಟ್ಟಾಗಿ ನಡೆಸಿದರೆ ಕೆಎಸ್‌ಆರ್‌ಟಿಸಿ ಉಳಿಯುತ್ತದೆ. ಇಲ್ಲ ಎಂದರೆ ನೀವು ನಿರ್ಣಯ ತೆಗೆದುಕೊಂಡು ಬಿಡಿ. "ನಾವು ಕೆಎಸ್‌ಆರ್‌ಟಿಸಿ ಬಂದ್ ಮಾಡಬೇಕೆಂದು ನಿರ್ಣಯ ಮಾಡಿದ್ದೇವೆ. ನಾವು ಖಾಸಗಿಯವರಿಗೆ ಅವಕಾಶ ಕೊಡುತ್ತೇವೆ" ಎಂದು. ಆ ನಿರ್ಣಯವನ್ನು ಸರ್ಕಾರದವರು ತೆಗೆದುಕೊಂಡರೆ ನಾವು ಕೈ ಎತ್ತುತ್ತೇವೆ. ಇಲ್ಲಿಯವರೆಗೆ ಬಾಂಬೆ ಕರ್ನಾಟಕದೊಳಗೆ ನಾಷನಲೈಸ್ ರೂಟ್ಸ್ ಒಳಗೆ ಇವು ಯಾವುವೂ ಓಡಲಾರದೆ ಹಾಗೆ ಮಾಡಿದ್ದೆವು. ಇನ್ನು ಮೇಲೆ ಆಗುವುದಿಲ್ಲ ಎಂದು ಹೇಳಿ ಸರ್ಕಾರ ಕೈ ಎತ್ತುತ್ತೇವೆ ಎಂದರೆ

ನಾವೂ ಕೈ ಎತ್ತುತ್ತೇವೆ. ದಯವಿಟ್ಟು ಬಹಳ ಕಠಿಣ ಕ್ರಮ ತಾವು ತೆಗೆದುಕೊಳ್ಳಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಡಿ.ಆರ್. ಪಾಟೀಲ್ ಅವರು ಹೇಳಿದ ಹಾಗೆ, ನಾನು ಅದಕ್ಕೆ ಒಪ್ಪುವುದಿಲ್ಲ. ಸರ್ಕಾರ ಕೈ ಎತ್ತಿ ಬಿಡುತ್ತೇವೆ ಎನ್ನುವುದಕ್ಕೆ ನಾನು ಒಪ್ಪುವುದಿಲ್ಲ. ನಾವು ಕೆಎಸ್ಆರ್‌ಟಿಸಿ ಹಿಂದೆ ರಾಷ್ಟ್ರೀಕರಣ ಆದಾಗ ಊರೂರು ಊರೂರಿಗೇ ಮೆರವಣಿಗೆ ಮಾಡಿ ಸ್ವಾಗತ ಮಾಡಿದ್ದೇವೆ. ಇನ್ನೂ ಅವರಿಗೆ ಗೊತ್ತಿರಲಿಕ್ಕಿಲ್ಲ. ನಾವು ಅವಾಗ ಮೆರವಣಿಗೆ ಮಾಡಿ ತೆಗೆದುಕೊಂಡಿದ್ದೇವೆ. ಇದೊಂದು ಬಹಳ ದೊಡ್ಡ ಕೆಲಸ ಆಯಿತು, ರಾಷ್ಟ್ರೀಕರಣ ಆಯಿತು, ನಮಗೆ ತಾಸಿಗೆ ಒಂದು ಬಸ್ ಬಿಡುತ್ತಾರೆ, ಅರ್ಧ ತಾಸಿಗೆ ಒಂದು ಬಸ್ ಬಿಡುತ್ತಾರೆ ಎಂದು ಹೇಳಿ ಊರೂರು ಮೆರವಣಿಗೆ ಮಾಡಿದ್ದೇವೆ. ಎಂದಿಗೂ ನಾವು ಅದನ್ನು ಬಂದ್ ಮಾಡಲು ಬಿಡುವುದಿಲ್ಲ. ಒಂದು ವೇಳೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುವುದಾದರೆ ನಾನೇ ನಿಮ್ಮ ಆಫೀಸಿನ ಮುಂದೆ ಉಪವಾಸ ಕೂಡುತ್ತೇನೆ. ಸ್ಪಷ್ಟವಾಗಿ ಹೇಳುತ್ತೇನೆ. ಅದನ್ನು ಬಂದ್ ಮಾಡುವಂತಹ ಪ್ರಶ್ನೆನೇ ಇಲ್ಲ. ಅದನ್ನು ಯಾವುದೇ ಪರಿಸ್ಥಿತಿಯಲ್ಲಿ ಉಳಿಸಿಕೊಳ್ಳಬೇಕು ಎಂದು ಕೂಡ ಹೇಳುತ್ತೇನೆ. ಆದರೆ ಪರಿಸ್ಥಿತಿಯನ್ನು ಹೇಳಿ ಬಿಡುತ್ತೇನೆ. ಮಾನ್ಯ ಸಚಿವರು ಈ ಕಡೆಗೆ ಲಕ್ಷ್ಯವನ್ನು ಹಾಕಬೇಕು. ಸುಮಾರು 70 ಕೋಟಿ ಹಾನಿ ಇದೆ. ಆಮೇಲೆ ಡೀಸೆಲ್‌ಗೆ 40–50 ಅಥವಾ ಎಷ್ಟೋ ಕೋಟಿ ರೂಪಾಯಿ ಕೊಡಬೇಕು, ಕೊಟ್ಟಿಲ್ಲ. ಅವರು ಡೀಸೆಲ್ ಬಂದ್ ಮಾಡುತ್ತಾರೆ. ನಿಮ್ಮ ಎನ್‌ಡಬ್ಲುಕೆಟಿ ಅವರು ಡೀಸೆಲ್ ಕೊಡುವುದನ್ನು ಬಂದ್ ಮಾಡುತ್ತಾರೆ. ಆಮೇಲೆ ಅಲ್ಲಿನ ನೌಕರರುಗಳ ಪರಿಸ್ಥಿತಿ ಹೇಳುತ್ತೇನೆ. ಸುಮಾರು ನಮ್ಮ ಗದಗ್ ಒಂದೇ ಡಿವಿಜನ್‌ನಲ್ಲಿ ಐದು ಕೋಟಿ ರೂಪಾಯಿ ಪಗಾರ ಇನ್ನೂ ಕೊಟ್ಟಿಲ್ಲ. ಅವರಿಗೆ ತಿಂಗಳ ಪಗಾರ ಇಲ್ಲ. ಪಗಾರ ಇಲ್ಲದೇ ಅವರು ಬದುಕುವುದು ಹೇಗೆ ಹೇಳಿ. ಇವರೇನು ಮಾಡಿ ಬಿಡುತ್ತಾರೆ? ಅಧಿಕಾರಿಗಳು ಏನು ಮಾಡುತ್ತಾರೆ ನೋಡಿ, ಮೊನ್ನೆ ನಾನು ರೋಡ್‌ನಲ್ಲಿ ಓಡಾಡುವಾಗ ಕಡೆಗೆ ನಾನೇ ನಿಂತುಕೊಂಡು ಅಷ್ಟೂ ಬಂದ್ ಮಾಡಿ ಅಷ್ಟು ಜನರನ್ನೂ ಕರೆಸಿ, "ನಿಮ್ಮ ಮೇಲೆ ಕೇಸ್ ಶುರು ಮಾಡುತ್ತೇನೆ" ಎಂದ ಬಳಿಕ ಮರು ದಿವಸ ಬಂದ್ ಆಯಿತು. ಈ ಕಾರಣದಿಂದ ನಾನು ದಯವಿಟ್ಟು ತಮಗೆ ಹೇಳುತ್ತೇನೆ. ಆಮೇಲೆ, ನಿನ್ನೆ ಒಂದು ಠರಾವು ಮಾಡಿದ್ದೀರಿ. ಕ್ಯಾಬಿನೆಟ್ ಡಿಸೀಷನ್ ಪೇಪರಿನಲ್ಲಿ ಬಂತು. ಅದೇನೋ ಹೊಸ ಬಸ್ ಖರೀದಿಗೆ, ತೀರ್ಮಾನ ಮಾಡಿದ್ದೀರಿ. ಏಕೆ ಮಾಡುತ್ತೀರಿ? ಇವನ್ನೆಲ್ಲಾ ಓಡಿಸುವುದಕ್ಕೆ ಪ್ರಯತ್ನ ಮಾಡಬೇಡಿ. ಮತ್ತೆ ಅದಷ್ಟೂ ಸರ್ಕಾರಕ್ಕೆ ಹೊರೆ ಆಗುತ್ತದೆ. ಅದಕ್ಕೆ ದಯವಿಟ್ಟು ಇವನ್ನೆಲ್ಲಾ ನಿಲ್ಲಿಸಬೇಕು. ಆಮೇಲೆ ವಿದ್ಯಾರ್ಥಿಗಳಿಗೆ ಪಾಸ್ ಕೊಡಿಸುತ್ತೇವೆ. ತಾವೀಗ ಹೆಚ್ಚಿನದು ಕೊಡುತ್ತೇವೆಂದು ಹೇಳಿದಿರಿ. ಯಾರು ಕೊಡುತ್ತಾರೆ? ಅಂತಹದಕ್ಕೆ ಈ ಬಸ್ಸನ್ನು ಉಪಯೋಗಿಸುತ್ತೇವೆ. ಉಳಿದದ್ದಕ್ಕೆಲ್ಲಾ ಕಂಟ್ರಾಕ್ಟ್ ಕೊಟ್ಟು ಅಧಿಕಾರಿಗಳು, ಯಾರ್ಯಾರೋ ಶಾಮೀಲಾಗಿ ಮಾಡುತ್ತಾರೆ. ಅದಕ್ಕೆ ನಾನೇನು ಹೇಳುತ್ತೇನೆ ಅಂದರೆ, ದಯವಿಟ್ಟು ಕಮೀಷನರ್ ಅಲ್ಲ ನೀವು ಎಂದು ಬರುತ್ತೀರಿ ಹೇಳಿ. ಮೀಟಿಂಗ್ ಮಾಡಿ ಬಿಡಿ, ನಮ್ಮನ್ನೂ ಕರೆದು

ಬಿಡಿ. ನೀವು ಎಂದು ಬರುತ್ತೀರಿ ಡಿ.ಸಿ. ಜೊತೆ ಹೇಳಿ ಬಿಡಿ. ನಾಳೆ ಬರುತ್ತೀರೋ, ನಾಡಿದ್ದು ಬರುತ್ತೀರೋ, 8 ದಿವಸಕ್ಕೆ ಬರುತ್ತೀರೋ ನೀವೇ ಬನ್ನಿ. ಬಂದು ಸ್ವತಃ ನೋಡಿ. ಆಮೇಲೆ ಹಿಂದಿನ ಸರ್ಕಾರ ಇದ್ದಾಗ, ನಮ್ಮ ಮಾನ್ಯ ಮುಖ್ಯಮಂತ್ರಿಗಳೂ, ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಕೂಡಿ ಸುಮಾರು ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ, ಒಂದು ಬಸ್ ಸ್ಟ್ಯಾಂಡ್ ಕಟ್ಟಲಾಗಿದೆ. ಆ ಬಸ್ ಸ್ಟ್ಯಾಂಡ್ ಉಪಯೋಗಿಸುತ್ತಿಲ್ಲ. ಏಕೆ ಅಂದರೆ ಇವರಿಗೆ ಏನು ಹೇಳಿದ್ದಾರೆ ಅಂದರೆ ಅವರು 12 ಕಿಲೋ ಮೀಟರ್ ಆಗುತ್ತದೆ ಎಂದು ಹೇಳಿದ್ದಾರೆ. ಆದರೆ ಅದು 12 ಕಿಲೋ ಮೀಟರ್ ಆಗುವುದಿಲ್ಲ. ಏಕೆ ಎನ್ನುವುದು ನಾನು ಅವರನ್ನು ಕರೆಸಿ ಕೇಳಿದೆ. ಇಲ್ಲ ಸಾರ್, ನಾವು ಹೇಳಿರುವುದು ಏಕೆ ಅಂದರೆ ಈಗೇನು ನಡು ಊರಿನಲ್ಲಿ ಬಸ್ ಸ್ಟಾಂಡ್ ಇದೆ. ಅದನ್ನು ಬಿಟ್ಟು ಅಲ್ಲಿಗೆ ಹೋದರೆ ಇವರೇ ಓಡಿಸುವುದಕ್ಕೆ ಹತ್ತುತ್ತಾರೆ. ಆರ್.ಆರ್. ಬಸ್‌ನವರು ಪ್ರಯಾಣಿಕರನ್ನು ಮಂದಿ ಹತ್ತಿಸಿಕೊಂಡು ಓಡಿಸುತ್ತಾರೆ. ಆ ನಾಲ್ಕು ಸೀಟೂ ಸಿಗುವುದಿಲ್ಲ ಎಂದು ಹೇಳುತ್ತಾರೆ. ಈಗ ಆ ಬಸ್ ಸ್ಟ್ಯಾಂಡಿನಲ್ಲಿ ಏನು ನಡೆಯುತ್ತದೆ ಅಂದರೆ ನಡೆಯಬಾರದ್ದು ನಡೆಯುತ್ತದೆ. ಹೊಸದಾಗಿ ಏನು 10, 12 ಕೋಟಿ ರೂಪಾಯಿ ಖರ್ಚು ಮಾಡಿ ಕಟ್ಟಿದ್ದೇವಲ್ಲ ಬಸ್ ಸ್ಟ್ಯಾಂಡ್ ಹಾಗೇ ಬಿದ್ದಿದೆ. ಏನೇನೂ ಆಪರೇಟ್ ಆಗುವುದಿಲ್ಲ. ರಾತ್ರಿ ದನ, ಕರು ಮಲಗಿರುತ್ತವೆ. ಇನ್ನು ಏನೇನೋ ನಡೆಯುತ್ತವಂತೆ, ಆ ಮಾತು ಇಲ್ಲಿ ಹೇಳುವುದಕ್ಕೆ ಬರುವುದಿಲ್ಲ. ಆ ಕಾರಣದಿಂದ ನಿಮಗೆ ಹೇಳುತ್ತೇನೆ. ಇದನ್ನು ಉಳಿಸಿಕೊಳ್ಳಬೇಕು. ಉಳಿಸಿಕೊಳ್ಳುತ್ತೀರೋ ಇಲ್ಲವೋ, ಸ್ಪಷ್ಟವಾಗಿ ಹೇಳಬೇಕು. ಉಳಿಸಿಕೊಳ್ಳಬೇಕಾದರೆ ಏನೇನು ಕ್ರಮ ತೆಗೆದುಕೊಳ್ಳುತ್ತೀರಿ? ಅವಂತೂ ನಿಲ್ಲಬೇಕು. ಹುಬ್ಬಳ್ಳಿ ನಡುವೆ ಓಡಾಡಿಸುವುದಕ್ಕೆ ಹತ್ತಿದ್ದರು. ಹುಬ್ಬಳ್ಳಿ–ಧಾರವಾಡದ ಮಧ್ಯೆ ಓಡಿಸುತ್ತಿದ್ದಾರೆ ಏನು ಕಷ್ಟ ಇದೆ? ಐದೈದು ನಿಮಿಷಕ್ಕೆ ನಮ್ಮ ಗವರ್ನಮೆಂಟ್ ಬಸ್ ಓಡಾಡುತ್ತಿದೆ. ದಯವಿಟ್ಟು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಅದನ್ನು ಕೂಡ ಹೇಳಬೇಕು. ಒಂದು ವೇಳೆ ಕ್ರಮ ತೆಗೆದುಕೊಳ್ಳದಿದ್ದರೆ ನಾನೇ ಉಪವಾಸ ಕೂಡುತ್ತೇನೆ.

ಅಧ್ಯಕ್ಷರು: ಇವತ್ತು ಕೊಶ್ಚನ್ಸ್ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಏಸಿ ಏನೋ ಅಪರೇಟ್ ಆಗುತ್ತಿಲ್ಲ. ಕುಳಿತುಕೊಳ್ಳುವುದಕ್ಕೆ ಆಗುತ್ತಿಲ್ಲ. ಅದನ್ನು ಸರಿ ಮಾಡಿಸಿ.

ಶ್ರೀ ಸಿ.ಎಸ್. ಪುಟ್ಟೇಗೌಡ (ಶ್ರವಣಬೆಳಗೊಳ) : ಮಾನ್ಯ ಅಧ್ಯಕ್ಷರೆ, ನಮಗೆ ಈ ಕಡೆ ಒಂದು ತೊಂದರೆ ಆಗುತ್ತಿದೆ. ಇಲ್ಲಿ ಏನು ಆಗಿದೆ ಅಂದರೆ ತಾವು ಅವರನ್ನು ಮಾತ್ರ ಸಮಾಧಾನ ಮಾಡಿದರೆ ಈ ಶಾಸನ ಸಭೆಯಲ್ಲಿ ಇಡೀ ರಾಜ್ಯ ಸಂತೃಪ್ತಿ ಆಗುತ್ತದೆ ಎನ್ನುವ ತರಹ ಕಾಣುತ್ತದೆ. ನಾವು ಈ ಕಡೆ ಮಧ್ಯೆ ಎದ್ದುನಿಂತು ಕೊಂಡು ನಮ್ಮ ಅಭಿಪ್ರಾಯ ಹೇಳಬೇಕು ಎಂದು ಬಂದರೂ ಅದಕ್ಕೆ ಅವಕಾಶ ಇಲ್ಲ. ನಮ್ಮನ್ನು ದಯಮಾಡಿ ಬಿಟ್ಟು ಬಿಡಿ. ನಮ್ಮ ಕಾನ್‌ಸ್ಟಿಟ್ಯುಯೆನ್ಸಿಗೆ ಹೋಗಿ, ಬೆಳಿಗ್ಗೆ ಹೊರಗಡೆ ಎದ್ದರೆ ಟ್ರಾನ್ಸ್‌ಫರ್ ಚೀಟಿ ಹಿಡಿದುಕೊಂಡು ಒಳಕ್ಕೆ ಬರಲು ಬಿಡುವುದಿಲ್ಲ. ಇಲ್ಲಿ

ಯಾರೂ ಬರೆಸಿಕೊಳ್ಳುವುದಕ್ಕೆ ಮಿನಿಸ್ಟರ್ ಸಿಕ್ಕುವುದಿಲ್ಲ. ಇಲ್ಲಿ ಏನಾಗಿದೆ ಎಂದರೆ ನಮಗೂ ಅವಕಾಶಗಳು ಬಂದಾಗ ದಯಮಾಡಿ ತಪ್ಪಿಸಬೇಡಿ. ನಾವು ಬಾಯಿ ಎತ್ತಿ ಏನಾದರೂ ಹೇಳದೇ ಹೋದರೆ ಮನೆಯಲ್ಲಿ ಹೆಂಗಸರು ಹೋಗಿ ಏತಕ್ಕೆ ಶಾಸನ ಸಭೆಗೆ ಹೋಗುತ್ತೀರಿ? ಊರೂ ಪೂರೈಸಲಿಲ್ಲ. ಊರ ಜನನೂ ನೀವು ಏನೂ ಮಾತನಾಡಿಲ್ಲ ಎಂದು ಹೇಳುತ್ತಾರೆ. ದಯಮಾಡಿ ಈಗೇನು ಕೆಎಸ್ಆರ್‌ಟಿಸಿ ಬಗ್ಗೆ ಮಾತನಾಡುತ್ತಿದ್ದರು. ನಮ್ಮ ಮಾನ್ಯ ಹೊಸ ಸಾರಿಗೆ ಸಚಿವರು ಯುವಕರಾಗಿದ್ದಾರೆ. ಈಗೇನೂ ಹೊಸದಲ್ಲ. ಹಳೆಯ ವ್ಯವಸ್ಥೆಯೇ ಇದೆ. ಹಳೆಯ ವ್ಯವಸ್ಥೆ ಬಹಳ ವರ್ಷದಿಂದ ಏನು ನಡೆದುಕೊಂಡು ಬಂದಿದೆ? ಎಲ್ಲೆಲ್ಲಿ ಏನೇನು ಯಾವ ರೀತಿ ಇಲಾಖೆ ನಡೆಯುತ್ತಿದೆ? ಅದೇ ಧಾಟಿ, ಹೊಸ ರಟ್ಟು ಹಾಕಿಕೊಳ್ಳಲಾಗಿದೆ. ಹಳೆಯ ಎಕ್ಸರ್‌ಸೈಜಿಗೆ ಹೊಸ ರಟ್ಟು ಹಾಕಿಕೊಂಡ ಹಾಗೆ ಎಲ್ಲ ಸರ್ಕಾರವೂ ಹಾಗೆಯೇ ನಡೆಯುತ್ತದೆ. ಆದರೆ ಯುವಕರು ಇದ್ದಾರೆ, ಯುವಕರ ಸರ್ಕಾರ ಇದೆ. ಮಾನ್ಯ ರಮೇಶ್ ಕುಮಾರ್ ಅವರು ಹೇಳುತ್ತಿದ್ದರು. ಅಟ್‌ಲೀಸ್ಟ್ ನಿಮ್ಮ ಚಾಕಚಕ್ಯತೆಯನ್ನಾದರೂ ತೋರಿಸಿ, ಜನ ಮೆಚ್ಚಿದ್ದಾರೆ ಎಂದು ಹೇಳಿದರು. ಯಾವುದೇ ಸರ್ಕಾರದಲ್ಲಿ ಆಗಲೀ, ಯಾರು ಬಡವ ಇದ್ದಾನೆ, ಪಹಣಿಗೆ ದುಡ್ಡು ಕೊಡದೇ ಯಾರೂ ಪಹಣಿ ಬರೆದುಕೊಡುವುದನ್ನು ಈ ರಾಜ್ಯದಲ್ಲಿ ಎಲ್ಲೂ ನೋಡಿಲ್ಲ. ಮುಂದೆ ಆ ವ್ಯವಸ್ಥೆ ಬರುತ್ತದೆ ಎಂಬ ಭರವಸೆಯನ್ನು ಕೂಡ ಕಳೆದುಕೊಂಡು ಬಿಟ್ಟಿದ್ದೇವೆ. ಚೆಲುವರಾಯ ಸ್ವಾಮಿಯವರು ಇದ್ದಾರೆ. ಅವರ ಇಲಾಖೆಯಲ್ಲಿ ಪೂರಾ ಭ್ರಷ್ಟಾಚಾರ ನಿಲ್ಲಿಸುತ್ತೇನೆ ಅಥವಾ ಭಾರೀ ಸುಧಾರಣೆ ಆಗುತ್ತದೆ ಎನ್ನುವುದು ಕೂಡ ಕಷ್ಟ. ಇಲ್ಲಿ ಎಷ್ಟರಮಟ್ಟಿಗೆ ಎಂದರೆ ಸಾಯುವ ಪೇಷಂಟ್‌ಗೆ ಒಂದು ಚೂರು ಹೇಗೋ ಒಂದು ಆರು ತಿಂಗಳು ಮೊಮ್ಮಕ್ಕಳು, ಮಕ್ಕಳನ್ನು ನೋಡಿಕೊಂಡು ಇರಲಿ ಎಂದು ಹೇಳಿ ಸುಧಾರಣೆ ಮಾಡುತ್ತಾರಲ್ಲ ಹಾಗೆ ನಮ್ಮ ವ್ಯವಸ್ಥೆ ಇದೆ. ನಮ್ಮ ಸಮಾಜ ಕೂಡ ಹಾಗೆಯೇ ಆಗಿ ಬಿಟ್ಟಿದೆ. ಯಾರಿಗಾದರೂ ಒಬ್ಬರು ನಮ್ಮ ಹತ್ತಿರ ಬಂದು ಕೆಲಸ ಮಾಡಿ ಎಂದರೆ ಪುಕ್ಸಟ್ಟೆ ಮಾಡಿಕೊಟ್ಟರೆ, ಮಾಡಿಕೊಟ್ಟರು ಎಂದು ಒಂದು ಸಲಾಮು ಸಹ ಹೊಡೆಯುವುದಿಲ್ಲ. ಅವನು ಏನಾದರೂ ಒಂದು ಲೆಕ್ಕಾಚಾರ ಮಾಡಿ ನೋಡಯ್ಯ, ಈಗ ಐದು ಕೊಡು, ಆಮೇಲೆ ಮಿಕ್ಕಿದ್ದು ಇನ್ನೊಂದು ಐದು ಕೊಡಯ್ಯ ಎಂದು ಮಾತನಾಡಿ ಐದು ಅಡ್ವಾನ್ಸ್ ತೆಗೆದುಕೊಂಡು, ಅದನ್ನು ಯಾರಾದರೂ ಮಾಡಿರಲಿ. ಆಕಸ್ಮಾತ್ ಕೆಲಸ ಆಯಿತು ಎಂದರೆ ನಮಗೆ ನಮಸ್ಕಾರನೂ ಹೊಡೆದು ಹೋಗುತ್ತಾರೆ. ಸಾರ್ ಆಯಿತು ಕೆಲಸ, ತಲುಪಿತಲ್ಲ ಸಾರ್, ಉಳಿದುದನ್ನು ತಲುಪಿಸುತ್ತೇನೆ ಎನ್ನುವ ಮಟ್ಟಕ್ಕೆ ನಾವು ಬಂದು ಬಿಟ್ಟಿದ್ದೇವೆ. ಆದ್ದರಿಂದ ಕೆಎಸ್ಆರ್‌ಟಿಸಿ ಬಗ್ಗೆ ನಿಜವಾಗಿಯೂ ಹೇಳಬೇಕು ಎಂದರೆ ಏನು ಒಂದು ಹತ್ತು ವರ್ಷಗಳ ಹಿಂದೆ ಪರಿಸ್ಥಿತಿ ಇತ್ತು? ಅದಕ್ಕಿಂತ ಇವತ್ತು ಸುಧಾರಣೆ ಆಗಿದೆ. ಅದು ಮಾನ್ಯ ಧರ್ಮಸಿಂಗ್ ಅವರ ಸರ್ಕಾರವಾಗಿರಲಿ, ಅಥವಾ ಮಾನ್ಯ ಕುಮಾರ ಸ್ವಾಮಿಯವರ ಸರ್ಕಾರ ಆಗಿರಲಿ.

ಅತ್ಯಂತ ಅವ್ಯವಸ್ಥೆ ಇತ್ತು. ಆದರೆ ಇವತ್ತು ಏನಾಗಿದೆ? ಒಳ್ಳೊಳ್ಳೆಯ ಕೆಲವು ಬಸ್‌ಗಳು ಹಾಕಿದ್ದಾರೆ. ಕೆಲವನ್ನು ಪ್ರವೇಟ್‌ನವರಿಗೆ ಕೊಟ್ಟಿದ್ದಾರೆ ಎನ್ನುವ ಮಾತನ್ನು ಕೂಡ ಹೇಳುತ್ತಾರೆ. ಲೋಪದೋಷಗಳು ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಏನಾಗಿದೆ? ಜನ ಈ ಸರ್ಕಾರವನ್ನು ಬಳಕೆ ಮಾಡಿಕೊಂಡು, ದುರುಪಯೋಗ ಮಾಡಿಕೊಳ್ಳತಕ್ಕವರೇ ಬಹಳ. ಏನಾಗಿದೆ? ಎಲ್ಲಾ ಬಸ್ ಕೂಡ ಸರ್ಕಾರಿ ಬಸ್ ಎಂದ ಮೇಲೆ ಪ್ರೈವೇಟ್‌ನವರನ್ನು ತೆಗೆದುಕೊಂಡು ಅವರಿಗಾಗಿ ಈ ಕೆಎಸ್‌ಆರ್‌ಟಿಸಿ ನಡೆಯುತ್ತಿದೆ ಎನ್ನುವಂತಹ ದೂರು ಕೂಡ ಜನರಿಂದ ಕೇಳಿ ಬರುತ್ತಿದೆ. ಅದು ಆಗಬಾರದು. ಮಾನ್ಯ ಎಸ್.ಎಸ್. ಪಾಟೀಲ್ ಅವರು ಹೇಳಿದರು. ಖಾಸಗಿಯವರ ಕೈಯಿಂದ ಕಿತ್ತುಕೊಂಡಿದ್ದೇ ನಾವು ಒಂದು ಸಾಹಸ ಮಾಡಿದ ಹಾಗೆ. ಅದನ್ನು ನಾವು ಬಹಳ ಮೆಚ್ಚಿಕೊಂಡವರು, ಪುರಸ್ಕಾರ ಮಾಡಿದವರು ಎನ್ನುವ ಮಾತನ್ನು ಹೇಳಿದರು. ಈಗಲೂ ಕೂಡ ಈ ವ್ಯವಸ್ಥೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ವ್ಯವಸ್ಥೆ ಆಗಿರಬೇಕೇ ವಿನಹ ಹೆಸರು ಮಾತ್ರ ಕರ್ನಾಟಕ ರಾಜ್ಯ ಸಾರಿಗೆ ವ್ಯವಸ್ಥೆ ಎಂದು ಇಟ್ಟುಕೊಂಡು ಎಲ್ಲವನ್ನೂ ಪ್ರವೇಟ್‌ನವರಿಗೆ ಏನಾದರೂ ಕೊಟ್ಟು ಅವರ ಬಸ್‌ಗಳನ್ನೇ ತೆಗೆದುಕೊಂಡು ಅವರ ಲಾಭಕ್ಕೋಸ್ಕರ ಈ ವ್ಯವಸ್ಥೆ ನಡೆಯುತ್ತಿದ್ದರೆ ಇದು ಖಂಡಿತ ಅಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಮಾನ್ಯ ಚೆಲುವರಾಯ ಸ್ವಾಮಿಯವರು ಹೊಸಬರು ಇದ್ದಾರೆ. ಇದಕ್ಕೆ ಎಷ್ಟು ಕಾಯಕಲ್ಪ ಮಾಡುವುದಕ್ಕೆ ಸಾಧ್ಯ ಈ ರಾಜ್ಯದಲ್ಲಿ ಓಡಾಡಿ; ಸುಧಾರಣೆ ಮಾಡಿದರೆ ಖಂಡಿತ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ ಎನ್ನುವಂತಹ ಮಾತನ್ನು ಹೇಳಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ವೈಜಾನಾಥ್ ಪಾಟೀಲ್ : ಒಂದೇ ಒಂದು ಪ್ರಶ್ನೆ ಇದೆ.

ಅಧ್ಯಕ್ಷರು : ಈಗ ಉತ್ತರ ಹೇಳಿ. ಅವಸರದಲ್ಲಿ ಅವರು ಒಂದು ವಿಚಾರ ಎತ್ತಿದರು.

ಶ್ರೀ ವೈಜನಾಥ ಪಾಟೀಲ್ : ನಾನು ಏನೋ ಹೇಳುವುದು ಇದೆ.

ಅಧ್ಯಕ್ಷರು : ಇನ್ನು ಬಹಳಷ್ಟು ವಿಷಯಗಳಿವೆ. ಇದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ವೈಜನಾಥ ಪಾಟೀಲ್ . ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ, ಬೀದರ್ ಎಲ್ಲಾ ಕಡೆ ರಾಷ್ಟ್ರೀಕರಣ ಆಗಬೇಕು ಎಂದು ಹೋರಾಟ ಮಾಡಿದ್ದವರೂ ನಾವೇ. ರಾಷ್ಟ್ರೀಕರಣ ಮಾಡಿಸಿದ್ದವರೂ ನಾವೇ. ಪ್ರೈವೇಟ್ ಬೇಸಿಸ್‌ನವರದ್ದು ಬಹಳ ಆಗಿತ್ತು. ಅದು ಇತ್ತೀಚಿನ ದಿನಗಳಲ್ಲಿ ನಮ್ಮ ಚಿಂಚೋಳಿಯಿಂದ ಗುಲ್ಬರ್ಗಾಕ್ಕೆ ಬರುವುದಿತ್ತು ಎಂದರೆ ಅಲ್ಲಿ ಸರ್ಕಾರಿ ಬಸ್‌ಗಳೇ ಟೈಮಿಗೆ ಬರುವುದಿಲ್ಲ. ಕೆಲವು ಹಳ್ಳಿಗಳಿಗೆ ಅಂತು ಅಲ್ಲಿ ಬಸ್‌ಗಳೇ ಹೋಗುವುದಿಲ್ಲ. ಈಗ ಟಾಂಟಾಂ ಆಗಿದೆ ಎಂದು ಹೇಳಿ ನಮ್ಮ ಮರ್ಯಾದೆ ಇದೆ. ಇಲ್ಲದೇ ಇದ್ದರೆ ಎಂಎಲ್‌ಎ ಮನೆ ಮುಂದೆ ಬಂದು ಜನರು ಕೂಡುತ್ತಾರೆ.

ನೂರಾರು ಜನರು ಎಲ್ಲೋ ಹೋಗುವುದು ಇರುತ್ತದೆ. ಮದುವೆಗಳಿಗೆ ಹೋಗುವುದು ಇರುತ್ತದೆ. ಯಾವುದೇ ಸರ್ಕಾರಿ ಬಸ್‌ಗಳು ಅದನ್ನು ಸರಿಯಾಗಿ ಎಫಿಷಿಯೆಂಟಾಗಿ ಹ್ಯಾಂಡಲ್ ಮಾಡುವುದಿದ್ದರೆ ಅದನ್ನು ಮಾಡಬೇಕು. ಇಲ್ಲದೇ ಇದ್ದರೆ ನೀವು ಪೂರ್ಣವಾಗಿ ಟಾಂಟಾಂ, ಪ್ರವೇಟ್ ಗಾಡಿಗಳು ಹಳ್ಳಿ ಹಳ್ಳಿಗಳೆಲ್ಲಾ ತಿರುಗುತ್ತಿದ್ದಾವೆ. ಲೈಸೆನ್ಸ್ ಇದೆನೋ ಇಲ್ಲವೋ. ನಾವು ಅದನ್ನು ಪೊಲೀಸ್‌ನವರಿಗೆ ಹಿಡಿಯಿರಿ ಎಂದು ಹೇಳುವುದಿಲ್ಲ. ಏಕೆಂದರೆ ಅವು ಇಲ್ಲದೇ ಹೋದರೆ ಜನರಿಗೆ ಹೋಗಿ ಬರುವುದೇ ಮುಷ್ಕಿಲ್ ಆಗುತ್ತದೆ. ತ್ರಾಸ ಆಗುತ್ತದೆ. ಆ ದೃಷ್ಟಿಯಿಂದ ಈ ಲಾಂಗ್ ರೂಟ್ ಏನು ಇದೆ? ಬೆಂಗಳೂರು–ಗುಲ್ಬರ್ಗಾ, ಬೆಂಗಳೂರು–ಬೀದರ್, ಅಥವಾ ಗುಲ್ಬರ್ಗಾ–ಬೀದರ್ ಇಂತಹದಕ್ಕೆ ಬೇಕಾದರೆ ತಾವು ಸ್ಟ್ರಿಕ್ಟ್ ಮಾಡಿ. ಆ ಸಣ್ಣ ಸಣ್ಣಕ್ಕೆಲ್ಲಾ ತಾವು ಸ್ಟ್ರಿಕ್ಟ್ ಮಾಡಿದರೆ ಆ ಎಂಎಲ್‌ಎ ಜನರಿಗೆ ಇರಗೊಡುವುದಿಲ್ಲ. ಜನ ಎಲ್ಲರೂ ಬಸ್‌ಗಳನ್ನು ಸರಿಯಾಗಿ ನಡೆಸುವುದಿಲ್ಲ ಎಂದರೆ ನಮ್ಮ ಮನೆಯ ಮುಂದೆ ಬಂದು ಕೂರುತ್ತಾರೆ. ಆ ದೃಷ್ಟಿಯಿಂದ ಅದನ್ನು ಗಮನದಲ್ಲಿಟ್ಟುಕೊಳ್ಳಿ ಎಂದು ನಾನು ಹೇಳುವುದು.

ಶ್ರೀ ಎನ್. ಚೆಲುವರಾಯಸ್ವಾಮಿ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ನಮ್ಮ ಮಾನ್ಯ ಹಿರಿಯ ಸದಸ್ಯರಾದಂತಹ ಡಿ.ಆರ್. ಪಾಟೀಲ್ ಮತ್ತು ಎಸ್.ಎಸ್. ಪಾಟೀಲ್‌ರವರು ಗಮನ ಸೆಳೆಯುವ ಸೂಚನೆ ಮೇರೆಗೆ ಕೊಟ್ಟಿರತಕ್ಕಂಥ ವಿಚಾರದಲ್ಲಿ ನಮ್ಮ ಮಾನ್ಯ ಹಿರಿಯ ಸದಸ್ಯರಾದಂತಹ ಕೆ.ಆರ್. ರಮೇಶ್ ಕುಮಾರ್ ಅವರು ವಾಸ್ತವ ಸತ್ಯವನ್ನು ಹೇಳಿದ್ದಾರೆ. ನಮ್ಮ ಡಿ.ಆರ್. ಪಾಟೀಲ್ ಅವರು ಹಾಗೂ ಎಸ್.ಎಸ್. ಪಾಟೀಲ್ ಅವರು ಹೇಳಿರತಕ್ಕದ್ದು ಸಹ ಆ ಭಾಗದಲ್ಲಿ ಕಳೆದ ನಾಲ್ಕು ದಿವಸದಿಂದ ಏನು ನಡೆಯುತ್ತಿದೆ. ಅದು ನನ್ನ ಗಮನಕ್ಕೆ ಬಂದಿದೆ. ನಾನು ಅಧಿಕಾರಿಗಳ ಜೊತೆ ಮಾತನ್ನೂ ಆಡಿದ್ದೇನೆ. ಕಮೀಷನರ್‌ಗೆ ಇವತ್ತು ನಾನು ಹೋಗಬೇಕು ಎಂದು ನಿನ್ನೆ ಹೇಳಿದ್ದೆ. ಜೆಸಿಟಿ ಅವರನ್ನು ಅಲ್ಲಿ ಕಳಿಸಿದ್ದಾರೆ. ಇವತ್ತು ಕಮೀಷನರ್ ಸಹ ಹೌಸ್ ಮುಗಿದ ನಂತರ ಹೋಗಲಿಕ್ಕೆ ತಮ್ಮ ಆದೇಶದಂತೆ ನಾನು ಸೂಚನೆಯನ್ನು ಕೊಡುತ್ತೇನೆ. ಇದರ ಜೊತೆಗೆ ನಾನು ಮಂಗಳೂರಿನಲ್ಲಿ ಮೊದಲನೇ ಭೇಟಿಯನ್ನು ಮಾಡಿದಾಗ ಮಂಗಳೂರಿನಲ್ಲೂ ಕೂಡ ಕಾಂಟ್ರಾಕ್ಟ್ ಕ್ಯಾರಿಯೇಜ್ ಇದೆ. ಇಲ್ಲಿ ಪೊಲೀಸ್, ಆರ್‌ಟಿಓ ಮತ್ತು ಕೆಎಸ್‌ಆರ್‌ಟಿಸಿ ಈ ಮೂರೂ ಇಲಾಖೆ ಏನು ಜಾಯಿಂಟ್ ಆಗಿ ಕೆಲವು ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದರಲ್ಲಿ ವಿಫಲತೆಯೂ ಆಗಿದೆ. ನೀವು ಹೇಳಿರತಕ್ಕದ್ದು ನೂರಕ್ಕೆ ನೂರು ಸತ್ಯ ಇದೆ. ಅದರಲ್ಲಿ ಏನೂ ಎರಡನೇ ಮಾತಿಲ್ಲ. ಈಗ ನಾವು ನಮ್ಮ ಮಾನ್ಯ ವಾಟಾಳ್‌ನಾಗರಾಜ್ ಅವರು ಹಾಗೂ ಮಾನ್ಯ ರಮೇಶ್ ಕುಮಾರ್ ಅವರು ವಾದ ಮಾಡುತ್ತಿದ್ದರು. ಅವರು ಮಾಡುತ್ತಾರೆ ಎಂದು, ಇವರು ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಿದ್ದರು. ನಮ್ಮ ಇನ್ನೊಬ್ಬ ನಾಯಕರು ಹೊರಗಡೆ ಇದ್ದಾರೆ. ಅವರ ಹೆಸರು ಹೇಳುವುದು ಸೂಕ್ತವಲ್ಲ. ಅವರು ಮೂರೂ ಜನರ ಒಂದೇ ಹೃದಯ,

ಬಾಡಿ ಬೇರೆ ಇದ್ದ ಹಾಗೆ. ಹಾಗಾಗಿ ಕಾಂಪಿಟೇಷನ್ ಇದೆ. ನಾವು ಯಾರ ಕಾಂಪಿಟೇಷನ್ ಬಗ್ಗೆ ನಾವು ಕೆಲಸ ಮಾಡಬೇಕು ಎನ್ನುವುದು ಮುಖ್ಯ. ಮಾನ್ಯ ರಮೇಶ್‌ಕುಮಾರ್ ಅವರು ಏನು ನಂಬಿಕೆ ಇಟ್ಟಿದ್ದಾರೆ. ಆ ನಂಬಿಕೆಯನ್ನು ಉಳಿಸಿಕೊಂಡು ಹೋಗತಕ್ಕ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡುತ್ತೇನೆ. ಇದು ಮೊದಲನೆಯದು. ಎರಡನೆಯ ಇವತ್ತೇನು ತಾತ್ಕಾಲಿಕವಾಗಿ ಹುಬ್ಬಳ್ಳಿ ಕಾರ್ಪೋರೇಷನ್‌ನಲ್ಲಿ ನಡೆಯುತ್ತಿರತಕ್ಕ ಉಪವಾಸ ಸತ್ಯಾಗ್ರಹ ಇದೆ. ಅದರ ಬಗ್ಗೆ ನಾನು ಕಮೀಷನರ್ ಅವರನ್ನು ಕಳುಹಿಸಿ ತಕ್ಷಣ ಅದು ನಿಲ್ಲತಕ್ಕ ಕ್ರಮಕ್ಕೆ ನಾನು ಮೊದಲ ಆದ್ಯತೆಯನ್ನು ಕೊಡುತ್ತೇನೆ. ನಂತರ ತಾವು ಹೇಳಿರತಕ್ಕ ವಿಚಾರದಲ್ಲಿ ನಾನೇ ಸ್ವತಃ ಹುಬ್ಬಳ್ಳಿಗೆ ಬಂದು ಮೀಟಿಂಗ್ ಅನ್ನು ಹುಬ್ಬಳ್ಳಿ ಡಿವಿಜನ್‌ನಲ್ಲಿ ಆದರೂ ಮಾಡೋಣ. ಗದಗ್‌ನಲ್ಲಾದರೂ ಮಾಡೋಣ. ನಿಮ್ಮ ಜೊತೆಯಲ್ಲಿ ಮಾತನಾಡಿ ಆ ಭಾಗದಲ್ಲಿ ಇವತ್ತು ಮೀಟಿಂಗ್ ಮಾಡಿ ಆರ್‌ಟಿಓ ಇವತ್ತೇನು ವಿಫಲತೆ ಹೊಂದುತ್ತಿದೆ.....

ಶ್ರೀ ಎ.ಬಿ. ಪಾಟೀಲ್ : ಬೆಳಗಾಂ, ಬಿಜಾಪುರದಲ್ಲಿ ಸಹ ಆರ್.ಆರ್. ಬಸ್ ಓಡಾಡುತ್ತಿವೆ.

ಶ್ರೀ ಎನ್. ಚೆಲುವರಾಯಸ್ವಾಮಿ : ಎಲ್ಲೆಲ್ಲಿ ಸಮಸ್ಯೆ ಇದೆ ನೋಡೋಣ. ಈಗ ಕೋಲಾರದಲ್ಲಿನ ಸಮಸ್ಯೆಯನ್ನು ಹೇಳಿದರು. ಕಳೆದ ಒಂದು ಹತ್ತು ದಿವಸದ ಹಿಂದೆ ನನಗೆ ಹೇಳಿದರು. ನಾನು ಮಾನ್ಯ ಶ್ರೀರಾಮರೆಡ್ಡಿಯವರ ಫಂಕ್ಷನ್‌ಗೆ ಹೋದಾಗಲೂ ಮಾತನಾಡಿದ್ದೇನೆ. ಕೋಲಾರ ಜಿಲ್ಲೆಯ ಪ್ರತಿನಿಧಿಗಳ ಒಂದು ಪ್ರತ್ಯೇಕವಾದ ಮೀಟಿಂಗ್ ಕರೆದು ಎಲ್ಲಾ ಚರ್ಚೆ ಮಾಡಿ ಸುಧಾರಣೆ ತರತಕ್ಕದ್ದು ಮತ್ತು ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸುವುದಕ್ಕೆ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ. ಈ ರಾಜ್ಯದ ಯಾವುದೇ ಭಾಗದಲ್ಲಿ ಈ ಸಮಸ್ಯೆ ಇರಲಿ ಅಥವಾ ಸಾರಿಗೆ ವ್ಯವಸ್ಥೆ ಎಲ್ಲಿ ಹೆಚ್ಚು ಬೇಕಾಗಲಿ. ಒಟ್ಟಾರೆ ಈ ಕಾಂಟ್ರಾಕ್ಟ್ ಕ್ಯಾರಿಯೇಜ್‌ನಿಂದ ನಿರ್ಧಂದನೆ, ಇವತ್ತೇನು ಆಕ್ಟ್‌ನಲ್ಲಿ ಪ್ರಾವಿಜನ್ ಇದೆ ಅದನ್ನು ಬಿಟ್ಟು ಎಲ್ಲಿ ಉಲ್ಲಂಘನೆ ನಡೆಯುತ್ತಿದೆ? ಅದರಲ್ಲಿ ಯಾವುದೇ ಮುಲಾಜಿಲ್ಲದೆ ಯಾವುದೇ ಭಾಗದಲ್ಲಿ ನಡೆಯುತ್ತಿರಲಿ, ಅದನ್ನು ನಿಲ್ಲಿಸತಕ್ಕದ್ದಕ್ಕೆ ಮೊದಲ ಆದ್ಯತೆ ಕೊಡುತ್ತೇನೆ. ನಂತರ ಕಾಂಟ್ರಾಕ್ಟ್ ಕ್ಯಾರಿಯೇಜನ್ನು ಸಂಪೂರ್ಣವಾಗಿ ರದ್ದು ಮಾಡತಕ್ಕದ್ದು ಮತ್ತು ಬಸ್ಸನ್ನು ಒದಗಿಸತಕ್ಕದ್ದು, ಅದೆಲ್ಲಾ ಮುಂದಿನ ಹೆಜ್ಜೆಯನ್ನು ನಾವು ಇಡತಕ್ಕದ್ದಕ್ಕೆ ನಾವು ಪ್ರಯತ್ನ ಮಾಡಬೇಕಾಗುತ್ತದೆ. ಈಗ ಕಳೆದ 50 ವರ್ಷಗಳಿಂದ ಬಂದಿರತಕ್ಕ ಈ ಸಮಸ್ಯೆಯನ್ನು ನಾನು ಒಂದೇ ಸಲ ನಿಲ್ಲಿಸುತ್ತೇನೆ ಎಂದರೆ ನಮ್ಮ ಮುಂದೆಯೇ ಇನ್ನೂ ನೂರು ಸಮಸ್ಯೆಗಳು ಉದ್ಭವ ಆಗುತ್ತವೆ. ನಾವೇ ತಿರುಗಿ ಕುಳಿತುಕೊಂಡು ಅದೇ ಸಮಸ್ಯೆಯನ್ನು ಪರಿಹರಿಸಬೇಕಾಗುತ್ತದೆ. ಆದ್ದರಿಂದ ಯಾವುದೇ ಭಾಗದಲ್ಲಿ ಈ ಸಾರಿಗೆ ವ್ಯವಸ್ಥೆ ಕಾಂಟ್ರಾಕ್ಟ್ ಕ್ಯಾರಿಯೇಜ್‌ನಿಂದ ಸಮಸ್ಯೆ ನಡೆಯುತ್ತಿದೆ. ಇಂತಹ ಆತಂಕ ಪಡತಕ್ಕದ್ದು. ಅದರ ಬಗ್ಗೆ ನಾವು ಸಂಪೂರ್ಣವಾಗಿ ಒಂದು ವಿಚಾರ ಹೇಳುತ್ತೇನೆ. ಈ ಸದನದ ಮೂಲಕ ತಮಗೆ ಮತ್ತು ಜನರಿಗೆ ಒಂದು ಮಾತನ್ನು ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಖಂಡಿತ ಯಾವ್ಯಾವ ಭಾಗದಲ್ಲಿರತಕ್ಕ ಸಮಸ್ಯೆ ಇರಲಿ, ನಾಲ್ಕೂ ವಿಭಾಗದಲ್ಲಿನ ಶಾಸಕರನ್ನು ಮೀಟಿಂಗ್‌ಗೆ ಕರೆದು ಇರತಕ್ಕ ಸಮಸ್ಯೆಯನ್ನು ಬಗೆಹರಿಸತಕ್ಕದ್ದು ಮತ್ತು ಮುಂದೆ ಯಾವ ರೀತಿ ನಾವು ಸುಧಾರಣೆ ತರಬೇಕು ಎನ್ನುವುದರ ಬಗ್ಗೆ ಸಹ ನಾನು ಬಹಳ ಸೀರಿಯಸ್ಸಾದ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ. ಮತ್ತು ಇವತ್ತು ಉಪವಾಸವನ್ನು ನಿಲ್ಲಿಸತಕ್ಕದ್ದಕ್ಕೆ ನಮ್ಮ ಆಯುಕ್ತರವರನ್ನು ಕಳುಹಿಸುತ್ತೇನೆ. ಯಾರ್ಯಾರು ಉಪವಾಸ ಮಾಡುತ್ತಿರುವ ಹಿರಿಯ ನಾಗರೀಕರು ಇದ್ದಾರೆ ಅವರೆಲ್ಲರಿಗೂ ಸಹ ನಾನು ಸದನದ ಮೂಲಕ ವಿನಂತಿ ಮಾಡುತ್ತೇನೆ. ನಮ್ಮ ಅಧಿಕಾರಿಯವರನ್ನೂ ಕಳುಹಿಸಿಕೊಡುತ್ತಿದ್ದೇನೆ. ಅವರು ಉಪವಾಸ ಸತ್ಯಾಗ್ರಹ ಕೈ ಬಿಡಲಿ. ತಕ್ಷಣ ತಾತ್ಕಾಲಿಕವಾದಂತಹ ಪರಿಹಾರವನ್ನು ನಾನು ಅಧಿಕಾರಿಗಳ ಮೂಲಕ ಕಳುಹಿಸಿಕೊಡುವುದಲ್ಲದೇ ನಾನೂ ಸಹ ಹೋಗಿ ಅಲ್ಲಿನ ಸ್ಥಳೀಯ ಎಲ್ಲಾ ಜನ ಪ್ರತಿನಿಧಿಗಳ ಜೊತೆ ಮಾತನಾಡಿ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ.

4. ಪ್ರಶ್ನೋತ್ತರ

ಅಧ್ಯಕ್ಷರು : ಈಗ ಪ್ರಶ್ನೋತ್ತರ. ಮಾನ್ಯ ಶಿವಾನಂದ ಎಸ್. ಪಾಟೀಲ್ ಅವರು ಪ್ರಶ್ನೆ ಕೇಳಿ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು 518ನೇ ಪ್ರಶ್ನೆಯನ್ನು ಮಾನ್ಯ ಮೀನುಗಾರಿಕಾ ಮತ್ತು ತೋಟಗಾರಿಕಾ ಇಲಾಖಾ ಸಚಿವರನ್ನು ಕೇಳಲು ಇಚ್ಛೆಪಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು) : ಮಾನ್ಯ ಮುಜರಾಯಿ ಇಲಾಖೆಯ ಮಂತ್ರಿಗಳು ಸ್ವಲ್ಪ ಪರ್ಮಿಷನ್ ತೆಗೆದುಕೊಂಡು ಹೋಗಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಪ್ರಶ್ನೋತ್ತರದಲ್ಲೂ ಅವರು ಇರಬಾರದೇನು?

ಶ್ರೀ ಶಿವಾನಂದ ಎಸ್ ಪಾಟೀಲ್ : ಸಾರ್ ಇದು ಮೂರನೇ ಬಾರಿ ನಾನು ಕೇಳುತ್ತಿರುವುದು.

ಅಧ್ಯಕ್ಷರು : ಅವರು ಏನೋ ಒಂದು ಕಾರ್ಯಕ್ರಮ ಇದೆ ಎಂದು ಪರ್ಮಿಷನ್ ತೆಗೆದುಕೊಂಡಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಏನು ಕಾರ್ಯಕ್ರಮ, ಸದನ ನಡೆಯುವಾಗ ನೀವೇ ಹೇಳುತ್ತೀರಿ, ಯಾವ ಕಾರ್ಯಕ್ರಮವನ್ನೂ ಇಟ್ಟುಕೊಳ್ಳಬಾರದು ಎಂದು ಹೇಳುತ್ತೀರಿ. ಅದು ಯಾವ ಕಾರ್ಯಕ್ರಮ.

ಅಧ್ಯಕ್ಷರು ; ಯಾವುದೇ ಕಾರ್ಯಕ್ರಮ ಇಟ್ಟುಕೊಳ್ಳಬಾರದು. ಇವತ್ತು ಇರಲಿಲ್ಲ. ಯಾವುದೋ ಒಂದು ಕಾರ್ಯಕ್ರಮ ಇಟ್ಟುಕೊಂಡು ಬಿಟ್ಟಿದ್ದೇವೆ ಎಂದು ನಿನ್ನೆ ನನಗೆ ಹೇಳಿದರು.

ಶ್ರೀ ಜಗದೀಶ್ ಶೆಟ್ಟರ್ : ಅಧ್ಯಕ್ಷರೆ, ನೆಕ್ಸ್ಟ್ ತೆಗೆದುಕೊಳ್ಳಲಿ.